ಆಂತರಿಕ ಪ್ರಸಾರಕ್ಕಾಗಿ ಮಾತ್ರ

ECHOES
INDIA

ಶ್ರೀ ರಾಮಚಂದ್ರ ಮಿಷನ್®

ಮೇ 2014 ಸಂಪುಟ 7 ಸಂಚಿಕೆ 3

# ಪೂಜ್ಯ ಬಾಬೂಜಿ ಮಹಾರಾಜರ 115ನೇ ಜಯಂತಿ – ಎಪ್ರಿಲ್ 29, 30 ಮತ್ತು ಮೇ 1, 2014






## ಡಿ ಜೆ ಪಾರ್ಕ್, ತಿರುಪ್ಪೂರ

ವಾರಗಳ ಮೊದಲೇ ಉತ್ಸವಕ್ಕಾಗಿ ಸಿದ್ಧತೆಗಳು ಆರಂಭವಾಗಿದ್ದವು. ಉತ್ಸವದ ಹಿಂದಿನ ವಾರಾಂತ್ಯದಲ್ಲಿ ಅಭ್ಯಾಸಿಗಳು ನಿವೇಶನಕ್ಕೆ ಹರಿದುಬರಲಾರಂಭಿಸಿದ್ದರು, ವಾತಾವರಣವು ಹರ್ಷ ಮತ್ತು ನಿರೀಕ್ಷೆಗಳನ್ನು ತುಂಬಿಕೊಂಡು ಬದಲಾಗಲಾರಂಭಿಸಿತ್ತು .

## ಧ್ಯಾನಾಂಗಣದಲ್ಲಿ

ಧ್ಯಾನಾಂಗಣವು ಉಜ್ವಲವಾಗಿ ಅಲಂಕೃತವಾಗಿತ್ತು ಮತ್ತು ಬಾಬೂಜಿಯವರ ಬೃಹತ್ ಗಾತ್ರದ ಚಿತ್ರವೊಂದು ವೇದಿಕೆಯಲ್ಲಿ ಎದ್ದು ಕಾಣುತ್ತಿತ್ತು. ಅಂಗಣದಲ್ಲಿ ಇರಿಸಿದ ಬೃಹತ್ LCD ಪರದೆಗಳು ಕಾರ್ಯಕ್ರಮಗಳನ್ನು ಅಲ್ಲಿ ಕುಳಿತ ಪ್ರತಿಯೊಬ್ಬರಿಗೂ ಸಮೀಪ ತಂದಿದ್ದವು. ನಿರ್ಜಲೀಕರಣವನ್ನು ತಪ್ಪಿಸುವುದಕ್ಕಾಗಿ ಅಭ್ಯಾಸಿಗಳು ಧಾರಾಳ ನೀರು ಸೇವಿಸಬೇಕೆಂದು ಸಲಹೆ ನೀಡಲಾಗಿದ್ದು ಸ್ವಯಂಸೇವಕರು ಕುಡಿಯುವ ನೀರನ್ನು ಸರಬರಾಜು ಮಾಡುತ್ತಿದ್ದರು.

ಗುರುಗಳು ತನ್ನ ಆರೋಗ್ಯದ ಕಾರಣದಿಂದಾಗಿ ಚೆನ್ನೈಯಲ್ಲಿ ಉಳಿಯಬೇಕಾಗಿದ್ದುದರಿಂದಾಗಿ ಮೂರು ದಿನಗಳ ಉತ್ಸವದಲ್ಲಿ ಎಂಟು ಸತ್ಸಂಗಳನ್ನು ಸೋದರ ಕಮಲೇಶ್‌ರವರು ನಡೆಸಿಕೊಟ್ಟರು. ಸತ್ಸಂಗಗಳು ಭಂಡಾರದಲ್ಲಿ ಉಪಸ್ಥಿತರಿದ್ದ ಸುಮಾರು 15000 ಅಭ್ಯಾಸಿಗಳಿಗೆ ಚೇತನತುಂಬಿ ಅವರ ಅನುಭವವನ್ನು ಗಾಢವಾಗಿಸಿದುವು. ಎಪ್ರಿಲ್ 29ರಂದು, 2014ರ ಮಾರ್ಚ್‌ನಲ್ಲಿ ಪಡೆದ ಕೆಲವು ವಿಶೇಷ ವ್ಹಿಸ್ಪರ್ಸ್ ಸಂದೇಶಗಳನ್ನು ಓದಿದ ನಂತರ ಸತ್ಸಂಗಗಳನ್ನು ನಡೆಸಲಾಯಿತು. ಈ ಸಂದೇಶಗಳು ಗುರುಗಳ ಉತ್ತರಾಧಿಕಾರಿಯಾಗಿ ಸೋದರ ಕಮಲೇಶ್ ಪಟೇಲ್‌ರವರಿಗೆ ಸಂಪೂರ್ಣ ಅಂಗೀಕಾರ ಮತ್ತು ದೃಢೀಕರಣನ್ನು ತಿಳಿಹೇಳಿದವು.




29ರ ಮುಂಜಾನೆ, ಮಕ್ಕಳು ಅನೇಕ ಪ್ರಕಟಣೆಗಳನ್ನು ಬಿಡುಗಡೆ ಮಾಡಿದರು. ಆನಂತರ ಸೋ.ಕಮಲೇಶ್‌ರವರು ರಾಮಚಂದ್ರರ ಸಮಗ್ರಕೃತಿಗಳ 4ನೇ ಸಂಪುಟದ ಬಗ್ಗೆ ಮತ್ತು ಬಾಬೂಜಿಯವರು ಅಭ್ಯಾಸಿಗಳಿಗೆ ಬರೆದ ಪತ್ರಗಳನ್ನು ಮತ್ತು ಈ ಹಿಂದೆ ಹಿಂದಿಯಲ್ಲಿ ಮಾತ್ರವೇ ಪ್ರಕಟವಾಗಿದ್ದ ಹಲವಾರು ಲೇಖನಗಳನ್ನು ಒಳಗೊಂಡಿರುವ ಈ









*"ತಪ್ಪಿಲ್ಲದಂತೆ, ದಿಕ್ಚ್ಯುತಿಗೊಳ್ಳದೆ, ಈ ಸಂದೇಶಗಳಲ್ಲಿ ದೃಢನಂಬುಗೆಯಿಂದ, ನಮ್ಮಲ್ಲಿ ವಿಶ್ವಾಸದಿಂದ, ಮನುಕುಲವೆಲ್ಲಕ್ಕೆ ಪ್ರೀತಿಯಿಂದೊಡಗೂಡಿ ಪಥವನ್ನು ಅನುಸರಿಸುವಂತೆ , ಎಲ್ಲ ಜೀವಸಂಕುಲಗಳಿಗೂ ನಮ್ಮ ಪ್ರೀತಿ ಬೆಳೆಯುವಂತೆ ಬಾಬೂಜಿಯವರು ನಮ್ಮನ್ನು ಹರಸಲಿ"*
*– ಪಿ. ರಾಜಗೋಪಾಲಾಚಾರಿ.*

ಸಂಪುಟವನ್ನು ಸಂಕಲಿಸಲು ಪರಿಶ್ರಮಿಸಿದ ಜನರ ಬಗ್ಗೆ ಮಾತನಾಡಿದರು. ಅಭ್ಯಾಸಿಗಳು ಬಿರುಬಿಸಿಲಿನ ಹೊರತಾಗಿಯೂ ಕಾರ್ಯಕ್ರಮ ಮುಗಿಯುವ ತನಕ ಧ್ಯಾನಾಂಗಣದಲ್ಲಿ ಉಳಿದಿದ್ದರು.

ಸೋ. ಕಮಲೇಶ್‌ರವರು 30ರ ಮುಂಜಾನೆ 6.00ಗಂಟೆಯ ಸತ್ಸಂಗದ ನಂತರ ಆರು ವಿವಾಹಗಳನ್ನು ನೆರವೇರಿಸಿಕೊಟ್ಟರು. ಅಲ್ಪವಿರಾಮದ ಬಳಿಕ ಚೆನ್ನೈಯಿಂದ ವೀಡಿಯೊ ಸಂಪರ್ಕದ ಮುಖಾಂತರ ಗುರುಗಳು ಪರದೆಗಳಲ್ಲಿ ಕಾಣಿಸಿಕೊಂಡರು. ಗುರುಗಳ ಮೊಮ್ಮಗಳು ಮಾಧುರಿಕೃಷ್ಣ ಓದಿದ ವ್ಹಿಸ್ಪರ್ಸ್ ಸಂದೇಶಗಳು ಮತ್ತು ಗುರುಗಳ ಭಾಷಣ ಉಪಸ್ಥಿತರಿದ್ದ ಎಲ್ಲರಿಗೂ ನೇರಪ್ರಸಾರದಲ್ಲಿ ಲಭ್ಯವಾಗುವಂತಾಯಿತು. ಜಗತ್ತಿನೆಲ್ಲೆಡೆಯ SRCM ಕೇಂದ್ರಗಳಿಗೆ ಇದೇ ಸಂಪರ್ಕ ಲಭ್ಯವಿತ್ತು.

ದಿನದ ಉಗ್ರ ಉಷ್ಣತೆಯು ತಂಗಾಳಿಗೆ ದಾರಿಮಾಡಿಕೊಟ್ಟ ಹಾಗೆ 30ರ ಸಾಯಂಕಾಲ, ಸೋದರಿ ರಂಜನಾರ ಭಜನೆಗಳು ಎಲ್ಲರನ್ನು ಗುರುಸ್ಮರಣೆಯಲ್ಲಿ ಇರಿಸಿದವು.

### ಇತರ ಚಟುವಟಿಕೆಗಳು

ವಲಯ ಸಂಚಾಲಕರು, ಕೇಂದ್ರ ಸಂಚಾಲಕರು ಮತ್ತು ಆಶ್ರಮ ನಿರ್ವಾಹಕರಿಗಾಗಿ ಒಂದು ಸಭೆ ನಡೆಸಲಾಯಿತು. ಹಾಗೆಯೇ ಉಳಿದ ವಿವಿಧ ತಂಡಗಳು ಮತ್ತು ಸ್ವಯಂಸೇವಕರು ಕೂಡಾ ಸಭೆಸೇರಿ ತಾವು ತೊಡಗಿದ್ದ ಕೆಲಸದ ಬಗ್ಗೆ ಚರ್ಚೆ ನಡೆಸಲು ಸಾಧ್ಯವಾಯಿತು.








ಮಕ್ಕಳು ಮತ್ತು ಯುವಕೇಂದ್ರಗಳು ಮಕ್ಕಳ ಮೂರು ವಯೋಮಾನದ ಗುಂಪುಗಳನ್ನು ಮಾಡಿ ಮಕ್ಕಳು ವಿವಿಧ ಚಟುವಟಿಕೆಗಳಲ್ಲಿತೊಡಗಿರುವಂತೆ. ಆ ತಾಣವನ್ನು ಉಜ್ವಲವರ್ಣಗಳ 8000ಕ್ಕಿಂತಲೂ ಹೆಚ್ಚು ಒರಿಗಾಮಿ'ಶಾಂತ ಸಾರಸ'ಗಳಿಂದ ಅಲಂಕರಿಸಲಾಗಿತ್ತು. ಹೊಸ ಪ್ರಕಟಣೆಗಳ ಬಿಡುಗಡೆಗಳನ್ನು ಅವೇ ಭಾಷೆಗಳಲ್ಲಿ ಪ್ರಕಟಿಸುವುವಲ್ಲಿ ಸೋ. ಕಮಲೇಶ್‌ಗೆ ಸಹಾಯುವಮಾಡಲು ಮಕ್ಕಳನ್ನು ಅದೃಷ್ಟ ಚೀಟಿಗಳನ್ನೆತ್ತಿ ಆರಿಸಲಾಯಿತು. ಭಂಡಾರದ ಅವದಿಯಲ್ಲಿ ಸುಮಾರು 2500 ಮಕ್ಕಳು ಹೆಸರನ್ನು ನೋಂದಾಯಿಸಿದ್ದರು.

ಉತ್ಸವ ಆವರಣದಲ್ಲಿ, ಅಗತ್ಯ ಬೀಳುವ ಸುದೀರ್ಘ ನಡಿಗೆಯನ್ನು ಕಡಿತಗೊಳಿಸಲು ಎಂದಿನ ದೊಡ್ಡ ಉಪಾಹಾರ ಮಂದಿರಕ್ಕೆ ಸೇರ್ಪಡೆಯಾಗಿ ಆವರಣದಲ್ಲಿ ಬೇರೆ ಮೂರು ಹರಡಿಕೊಂಡಿದ್ದವು. ಭೋಜನಶಾಲೆ, ವಸತಿಗುಡಾರಗಳು, ಇತಿಹಾಸ ಪ್ರದರ್ಶನದ ಸ್ಥಳ, ಛಾಯಾಚಿತ್ರ ಗ್ಯಾಲರಿ, ಟೀಶರ್ಟ್‌ಗಳ ಮಾರಾಟಸ್ಥಳ ಇತ್ಯಾದಿಗಳು ಭಂಡಾರವು ಸುಗಮವಾಗಿ ನಡೆಯಲು ಅನುಕೂಲವಾಗುವಂತೆ ನಿರ್ಮಿಸಿದ ಗುರುಸ್ಮರಣೆಯ ಮೂಲಭೂತ ವ್ಯವಸ್ಥೆಯ ಭಾಗಗಳಾಗಿದ್ದವು. ಗುರುಗಳ ಕುಟೀರದ ಹೊರಗಣ ಮೌನವಲಯವು ಒಂದು ಸೂಕ್ತ ವಾತಾವರಣ ಮತ್ತು ಗುರುಸ್ಮರಣೆಯನ್ನು ಉಂಟುಮಾಡಿತ್ತು.











## ಭಾಷಣಗಳು

ಭಂಡಾರಾವಧಿಯಲ್ಲಿ ಸೋ. ಕಮಲೇಶ್‌ರವರು ಸೇರಿದವರನ್ನುದ್ದೇಶಿಸಿ ಮೂರು ಸಲ ಮಾತನಾಡಿದರು. ಅವರು ನಿಯಮಿತ ಸಾಧನೆಯ ಅಗತ್ಯವನ್ನು ಒತ್ತಿಹೇಳಿದರು. ಮತ್ತು ಬಾಬೂಜಿ ಮಹಾರಾಜರ ಬೋಧನೆಗಳನ್ನುಪುನರುಚ್ಚರಿಸಿದರು. ಮೇ 1ರಂದು ನೀಡಿದ ಸಮಾರೋಪ ಭಾಷಣದಲ್ಲಿ ಅವರು, ವಿಕಸನವನ್ನು ನಿಧಾನಗೊಳಿಸುವ ಒಂದು ಅಂಶವೆಂದರೆ ಆಸೆ, ಧ್ಯಾನ ಮತ್ತು ನಿರಂತರ ಸ್ಮರಣೆಯ ಅಭ್ಯಾಸದ ಮೂಲಕ ನಾವು ಆಸೆಗಳು ಮುಂದೆಂದೂ ನಮ್ಮ ಮೇಲೆ ಪ್ರಭಾವಬೀರದಂಥ ಸ್ಥಿತಿಯನ್ನು ತಲುಪಲು ಪ್ರಯತ್ನಿಸಬೇಕು ಎಂದರು. ಈ ಸಮಾರಂಭವು ಒಂದು ಭವ್ಯ ಉತ್ಸವವಾಗುವಂತೆ ಮಾಡುವಲ್ಲಿ ನೆರವಿತ್ತ ಎಲ್ಲ ಸಂಘಟಕರು ಮತ್ತು ಸ್ವಯಂಸೇವಕರನ್ನು ವಂದಿಸುತ್ತ ಅವರು, "ಅಜ್ಞಾತರಾಗಿ ಉಳಿಯುವ ಸರ್ವ ಆತ್ಮಗಳೂ ತಮ್ಮ ಗಮ್ಯವು ಗುರುವಿನ ಕೋಮಲ ಹೃದಯದಲ್ಲಿ ಚೆನ್ನಾಗಿ ತಗುಲಿಸಿಕೊಂಡಿದೆ ಎಂಬ ಪುನರಾಶ್ವಾಸನೆ ಹೊಂದಿರಬೇಕು" ಎಂದರು.

## ಮಣಪಾಕ್ಕಂನಲ್ಲಿ

ಮಣಪಾಕ್ಕಂ ನಲ್ಲಿ 3500ಕ್ಕಿಂತಲೂ ಹೆಚ್ಚು ಅಭ್ಯಾಸಿಗಳು ಉಪಸ್ಥಿತರಿದ್ದರು. ಧ್ಯಾನಮಂದಿರದ ಪ್ರವೇಶಭಾಗವು ವರ್ಣರಂಜಿತ ರಂಗವಲ್ಲಿ ಮತ್ತು ಪುಷ್ಪಗಳಿಂದ ಅದ್ಭುತವಾಗಿ ಶೃಂಗಾರಗೊಂಡಿತ್ತು. ಎಪ್ರಿಲ್ 29, 30 ಮತ್ತು ಮೇ 1ರಂದು ಗುರುಗಳು ಧ್ಯಾನಮಂದಿರದಲ್ಲಿ ಮುಂಜಾನೆಯ ಸತ್ಸಂಗವನ್ನು ನಡೆಸಿಕೊಟ್ಟರು. ವಿವಿಧ ದೇಶಗಳಿಂದ ಬಂದ ಅಭ್ಯಾಸಿಗಳನ್ನು ಅವರು ಭೇಟಿಯಾದರು.

30ರಂದು ಗುರುಗಳು ಕುಟೀರದಲ್ಲಿ ಮುಂಜಾನೆ 6.00ಗಂಟೆಗೆ ಪ್ರಸಾದವನ್ನರ್ಪಿಸಿದರು. ಅವರು ಉತ್ಸಾಹದಿಂದ ದೇದೀಪ್ಯಮಾನರಾಗಿ ಕಾಣುತ್ತಿದ್ದರು. ಸತ್ಸಂಗಾನಂತರ, ತಿರುಪ್ಪೂರದ ಭಂಡಾರದೊಂದಿಗೆ ನೇರ ವೀಡಿಯೋ ಸಂಪರ್ಕವನ್ನು ಏರ್ಪಡಿಸಲಾಯಿತು. ಸೋ. ಮಾಧುರಿಕೃಷ್ಣರವರು ಎಪ್ರಿಲ್ 30ರ ವ್ಹಿಸ್ಪರ್ಸ್ ಸಂದೇಶವನ್ನು ಓದಿದರು. ತರುವಾಯ ಗುರುಗಳು ಮಾತನಾಡಿದರು. ಇತ್ತೀಚೆಗಿನ ವ್ಹಿಸ್ಪರ್ಸ್ ಸಂದೇಶಗಳನ್ನು ಉಲ್ಲೇಖಿಸಿ ಅವರು ಮಿಷನಿನ ಮುಂದುವರಿಕೆಯ ಬಗ್ಗೆ ಅವುಗಳ ಪುನರ್ದೃಢೀಕರಣವನ್ನು ಪುನರುಚ್ಚರಿಸಿ, ಹೇಗಿದ್ದರೂ ನಾವು ಸ್ವತಃ ವರ್ತಮಾನದಲ್ಲಿ ಕಾಳಜಿ ವಹಿಸಿ ಭವಿಷ್ಯತ್ತನ್ನು ಭವಿಷ್ಯತ್ತಿಗೇ ಬಿಟ್ಟುಬಿಡಬೇಕು ಎಂದರು. ಅವರು, "ನಾನು ಮತ್ತೆ ಹೇಳುತ್ತೇನೆ, ನಾವು ಪ್ರಕೃತಿಯ ನಮ್ಮನ್ನು ಇರಿಸಿದ ಈ ಸಮಯದ, ನಮಗೆ ಒದಗಿಸಿದ ಇಂದು ಅದು ಇರುವಂತೆ ಮಿಷನಿನ ಸದವಕಾಶವನ್ನು, ಅದು ನಮಗೇನು ಲಾಭಗಳನ್ನು ಕೊಡಲಿದೆಯೋ ಅದರ ಲಾಭವನ್ನು ಬಾಚಿಕೊಳ್ಳಬೇಕಾಗಿದೆ ಮತ್ತು ಸರ್ವರಿಗಾಗಿ ಪ್ರೇಮದೊಂದಿಗೆ, ಪೂರ್ವಗ್ರಹಗಳಿಲ್ಲದೆ, ದ್ವೇಷವಿಲ್ಲದೆ, ಟೀಕೆಯಿಲ್ಲದೆ, ಹಿಂಜರಿಯದೆ ಮುಂದಕ್ಕೆ ಸಾಗಬೇಕಾಗಿದೆ. ಈ ವಿಷಯಗಳನ್ನು ಮಾತನಾಡುವುದು ಸುಲಭ, ಆದರೆ ಅವುಗಳನ್ನು ಆಚರಣೆಯಲ್ಲಿ ತರುವುದು ತುಂಬ ಕಷ್ಟ" ಎಂದರು. ನಂತರ ಗುರುಗಳು ಸೋದರಿ. ಮಂದನರೊಂದಿಗೆ ಬಾಬೂಜಿ ಮಹಾರಾಜರಿಗೆ ಅರ್ಪಿಸುತ್ತ ಹುಟ್ಟುಹಬ್ಬದ ಕೇಕ್‌ನ್ನು ತುಂಡುಮಾಡಿದರು.

> *"ನಾವು ವಿಕಸನಹೊಂದುತ್ತಿರುವೆವಾದರೆ, ಇಲ್ಲೂ ನಾವು ವಿಕಾಸ ಹೊಂದಲೇ ಬೇಕು. ಅದು ಇಲ್ಲಿಂದ ಆರಂಭಿಸಿ ಅಲ್ಲಿ ಕೊನೆಗೊಳ್ಳುತ್ತದೆ. ಅದು ಹೇಗೆ ಆರಂಭವಾಗುತ್ತದೆ? ನಮ್ಮ ಹೃದಯಗಳಲ್ಲಿ ಬೆಳೆಯುತ್ತಿರುವ ಒಂದು ಹಗುರತೆಯಿಂದ, ಪೂರ್ವಗ್ರಹವಿಲ್ಲದೆ ದ್ವೇಷವಿಲ್ಲದೆ ಹೆಚ್ಚು ಹೆಚ್ಚು ಮಾನವಜೀವಿಗಳನ್ನು ಆಲಿಂಗಿಸುವಂಥ ವರ್ಧಿಸುತ್ತಿರುವ ಪ್ರವೃತ್ತಿಯಿಂದ"*
> *– ಪಿ. ರಾಜಗೋಪಾಲಾಚಾರಿ.*





# ಮಣಪಾಕ್ಕಂನಿಂದ ವಾರ್ತೆಗಳು

## ಫೆಬ್ರವರಿ 2014

**‘ಗಾಯತ್ರಿ’ಯಲ್ಲಿ ಗುರುಗಳು:** 5–14 ಫೆಬ್ರವರಿ

ತಿರುವಳ್ಳೂರಿನ ಭೂಮಿಯಲ್ಲಿ ವೈದ್ಯಕೀಯ ಕೇಂದ್ರದ ನಿರ್ಮಾಣವನ್ನು 5ನೇ ತಾರೀಖಿನಂದು ಪ್ರಾರಂಭಿಸುವ ಯೋಜನೆಯಿದ್ದಿತು. ಗುರುಗಳು ಪ್ರಯಾಣ ಮಾಡುವ ಸ್ಥಿತಿಯಲ್ಲಿ ಇರಲಿಲ್ಲವಾದುದರಿಂದ ಅವರು ಸೋ.ಕಮಲೇಶ್ ಮತ್ತು ಸೋ.ಪಿ.ಆರ್. ಕೃಷ್ಣರವರನ್ನು ಕಳುಹಿಸಿದರು. ಬೆಳಿಗ್ಗೆ ಸುಮಾರು 11 ಗಂಟೆಗೆ ಅವರು ಮಾಲ್ ಒಂದಕ್ಕೆ ಭೇಟಿ ನೀಡಿ, ಕೆಲವು ತಿಂಡಿಗಳನ್ನು ಖರೀದಿಸಿ, ‘ಗಾಯತ್ರಿ’ಗೆ ತೆರಳಿ ಅವರ ಪರಿವಾರದವರಿಗೆ ಆಶ್ಚರ್ಯವನ್ನುಂಟುಮಾಡಿದರು. ಅವರು ಮರಳಿ ಆಶ್ರಮಕ್ಕೆ ಬರಲು ಯೋಜಿಸಿದ್ದರೂ ಸಹ, ಅದನ್ನು ಬದಲಾಯಿಸಿ ‘ಗಾಯತ್ರಿ’ಯಲ್ಲಿ ತಂಗಲು ನಿರ್ಧರಿಸಿದರು.

**ಕಾನ್ಪುರ ಆಶ್ರಮ ನಿರ್ಮಾಣ ಉದ್ಘಾಟನೆ:**

ಭಾನುವಾರ, ಫೆಬ್ರವರಿ 9

ಗುರುಗಳು ಸಾಕಷ್ಟು ಮುಂಚಿತವಾಗಿ ಸಿದ್ಧರಾಗಿದ್ದರು, ಆದರೆ ಅವರ ಆರೋಗ್ಯ ಸರಿಯಿರಲಿಲ್ಲ. ಆದರೂ ಸಹ ಅವರು ವಿಡಿಯೋ ಸಂಪರ್ಕ ಮೂಲಕ ಕಾನ್ಪುರದ ಅಭ್ಯಾಸಿಗಳನ್ನು ಅಭಿವಂದಿಸಿದಾಗ ಅವರು ಪ್ರೇಮಾಭಿಮಾನದಿಂದ ಸ್ಪಂದಿಸಿದರು. ತತ್‌ಕ್ಷಣವೇ ಗುರುಗಳು ಉಲ್ಲಸಿತರಾಗಿ ನೆರೆದ ಅಭ್ಯಾಸಿಗಳಿಗೆ ಸಂದೇಶವನ್ನು ನೀಡಿದರು. ಅಡಿಪಾಯಕ್ಕಾಗಿ ಇಟ್ಟಿಗೆಗಳ ಜೋಡಣೆಯ ಬಗ್ಗೆ ಅವರು ಸೂಚನೆಗಳನ್ನು ನೀಡಿದರು. ಯೋಜನೆಯ ವಿವರಗಳನ್ನು ಆಲಿಸುತ್ತಾ ಅವರು, “ನಿಮಗಾಗಿ ನಾನು ಸತ್ಸಂಗವನ್ನು ಇಲ್ಲಿಂದ ಪ್ರಾರಂಭಿಸುವೆ ಮತ್ತು ನೀವೆಲ್ಲರೂ ಧ್ಯಾನವನ್ನು ಪ್ರಾರಂಭಿಸಬಹುದು.” ಎಂದರು. ನಂತರ, ಗುರುಗಳು ‘ಗಾಯತ್ರಿ’ಯ ಹಜಾರಕ್ಕೆ ಬಂದು ಅಲ್ಲಿ ನೆರೆದ ಅಭ್ಯಾಸಿಗಳಿಗಾಗಿ ಸತ್ಸಂಗವನ್ನು ನೀಡಿದರು. ಅದು ಒಂದು ಗಂಟೆಯ ಅವಧಿಯದ್ದಾಗಿದ್ದು ತದನಂತರ ನಂತರ ಗುರುಗಳು ಬಳಲಿದ್ದು, ವಿಶ್ರಾಂತಿಗಾಗಿ ಒಳಗೆ ತೆರಳಿದರು.

ಅದೇ ಸಮಯದಲ್ಲಿ, ಆಶ್ರಮದಲ್ಲಿ ಸೋ. ಕಮಲೇಶ್‌ರವರು ಕೆಲವು ವಿವಾಹಗಳನ್ನು ನೆರವೇರಿಸಿದರು.

**ಯುರೋಪಿಯನ್ ಪ್ರಶಿಕ್ಷಕರ ವಿಚಾರಸಂಕಿರಣ:** 15–20 ಫೆಬ್ರವರಿ 2014

15ರಂದು ಕಾರ್ಯಕ್ರಮದ ಉದ್ಘಾಟನೆಗೆಂದು ಗುರುಗಳು ಮಣಪಾಕ್ಕಂಗೆ ಬಂದರು. ಪ್ರಶಿಕ್ಷಕರು ನೆರೆದಿದ್ದ ‘ಡಾರ್ಮ್ ಎ’ನಲ್ಲಿ ಅವರು ಸತ್ಸಂಗವನ್ನು ನಡೆಸಿದರು ಮತ್ತು ಕೆಲಸದಲ್ಲಿನ ಸೂಕ್ಷ್ಮ ಸುಧಾರಣೆಗಳ ಬಗೆಗೆ ಮಾತನಾಡಿದರು. ಪ್ರಶಿಕ್ಷರಾಗಿ ನಾವು ಮಾಡುವ ಕೆಲಸವನ್ನು ಪ್ರೀತಿಸಿದಾಗ ಆ ಕಾರ್ಯವು ಸುಧಾರಿಸುತ್ತ ಹೋಗುತ್ತದೆ ಮತ್ತು ಅಧಿಕ ಪರಿಣಾಮಕಾರಿಯಾಗುತ್ತದೆ ಎಂದು ಅವರು ಹೇಳಿದರು. ಅವರು ಇದರ ಅನೇಕ ಉದಾಹರಣೆಗಳನ್ನು ನೀಡಿದರು. ‘ಗಾಯತ್ರಿ’ಗೆ ಮರಳಿ ಹೋಗುವಾಗ ಅವರು ಪ್ರತಿದಿನ ಸಂಜೆ ಚಿಕ್ಕ ತಂಡಗಳಲ್ಲಿ ಬಂದು ತಮ್ಮನ್ನು ಬೋಧನೆಗಳನ್ನು ಪುನರುಚ್ಚರಿಸಿದರು.

**ಅಂತರರಾಷ್ಟ್ರೀಯ ವಿದ್ವತ್ ತರಬೇತಿ ಕಾರ್ಯಕ್ರಮ(ISTP)**

15ರಂದು, ಗುರುಗಳು IST ಕಾರ್ಯಕ್ರಮದ ಭಾಗಿಗಳು ಮತ್ತು ಆಯೋಜಕರನ್ನು ತಮ್ಮೊಂದಿಗೆ ಮಧ್ಯಾಹ್ನದ ಭೋಜನ ಮಾಡಲು ಆಹ್ವಾನಿಸಿದರು. ಭಾಗಿಗಳಿಗೆ ಪ್ರಮಾಣಪತ್ರವನ್ನು ವಿತರಿಸಿದ ನಂತರ, ಗುರುಗಳು ಎಲ್ಲರೂ ತಟ್ಟೆಯನ್ನು ತೆಗೆದುಕೊಂಡರೆಂದು ಖಾತ್ರಿ ಪಡಿಸಿಕೊಂಡು ಅವರೊಂದಿಗೆ ಅಂಗಳದಲ್ಲಿ ಭೋಜನವನ್ನು ಸ್ವೀಕರಿಸಿದರು. ಆ ದಿನ ಸಂಜೆ, ಅವರು ‘ಗಾಯತ್ರಿ’ಗೆ ಮರಳಿದರು.

**ಭಾನುವಾರ, ಫೆಬ್ರವರಿ 16**

ಮುಂಜಾನೆ ‘ಗಾಯತ್ರಿ’ಯಲ್ಲಿ ಸೇರಿದ ಸುಮಾರು ಅರವತ್ತು ಅಭ್ಯಾಸಿಗಳಿಗಾಗಿ ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು. ತದನಂತರ ಅವರು ಬಳಲಿದ್ದು, ವೈದ್ಯಕೀಯ ಉಪಚಾರಕ್ಕಾಗಿ ತೆರಳಿದರು.

ಸಂಜೆ, ಪ್ರಶಿಕ್ಷಕರ ವಿಚಾರಸಂಕಿರಣದಿಂದ ಸುಮಾರು ಅರವತ್ತು ಅಭ್ಯಾಸಿಗಳು ‘ಗಾಯತ್ರಿ’ಗೆ ಆಗಮಿಸಿದರು. ಗುರುಗಳು ಅವರೊಂದಿಗೆ ಹಜಾರದಲ್ಲಿ ಕುಳಿತರು ಮತ್ತು ಅವರಿಗೆಲ್ಲ ತಿಂಡಿಯ ವ್ಯವಸ್ಥೆ ಮಾಡಲಾಯಿತು. ಪ್ರಾರಂಭದಲ್ಲಿ ಮೌನ ಹರಡಿದ್ದಿತು, ಮತ್ತೆ ಒಬ್ಬ ಸಹೋದರಿ ಪಿಟೀಲು ನುಡಿಸಿದರು ಮತ್ತು ಆಕೆ ವಾದ್ಯದ ಕಂಪನದ ಕುರಿತು ಮಾತನಾಡಿದಾಗ, ಗುರುಗಳು, “ಸಕಲವೂ ಕಂಪನವೇ” ಎಂದು ನುಡಿದರು. ಆ ಸೋದರಿಯು ಕೃತಿಯೊಂದನ್ನು ಮುಕ್ತಾಯಗೊಳಿಸಿದಾಗ, ಗುರುಗಳು ಮುಂದುವರೆಸಲು ಹೇಳಿದರು. ಇದಾದ ನಂತರ ಅಭ್ಯಾಸಿಗಳು ಮುಂದೆ ಬಂದು ಅವರಿಗೆ ಪತ್ರಗಳು, ಉಡುಗೊರೆ ಮುಂತಾದವನ್ನು ನೀಡಿದರು. ಗುರುಗಳು ಸ್ವಲ್ಪ ಹೊತ್ತು ಮಾತನಾಡುತ್ತ, ತಮ್ಮ ಯುರೋಪ್ ಪ್ರವಾಸಗಳನ್ನು ಸ್ಮರಿಸುತ್ತ, ಭಾಷೆಗಳ ಬಗ್ಗೆ – ವಿಶೇಷತಃ





continued.



ಸ್ಕ್ಯಾಂಡಿನೇವಿಯನ್ ಭಾಷೆಗಳನ್ನು ಕಲಿಯುವುದು ಕಠಿಣವೆಂದು ಹೇಳಿದರು.

ಆ ವಾರವಿಡೀ ಇದೇ ನಿತ್ಯಕ್ರಮವಾಗಿದ್ದಿತು: ಬೆಳಗಿನ ಸಮಯ ಅಭ್ಯಾಸಿಗಳು ಗುರುಗಳನ್ನು ಭೇಟಿ ಮಾಡುತ್ತಿದ್ದರು ಹಾಗು ಸಂಜೆ ಗುರುಗಳು 50ರಿಂದ 60ರಷ್ಟು ಸಂಖ್ಯೆಯಲ್ಲಿ ಬರುತ್ತಿದ್ದ ಐರೋಪ್ಯ ಪ್ರಶಿಕ್ಷಕರನ್ನು ಭೇಟಿ ಮಾಡುತ್ತಿದ್ದರು.

### ಭಾನುವಾರ, ಫೆಬ್ರವರಿ 23

ಗುರುಗಳ ಆರೋಗ್ಯ ಸುಸ್ಥಿತಿಯಲ್ಲಿರದ ಕಾರಣ, ಅಭ್ಯಾಸಿಗಳನ್ನು 'ಗಾಯತ್ರಿ'ಗೆ ಭೇಟಿ ನೀಡದಂತೆ ವಿನಂತಿಸಿಕೊಳ್ಳಲಾಯಿತು; ಆದರೂ ಕೂಡ ಬಹುಸಂಖ್ಯೆಯಲ್ಲಿ ಅಭ್ಯಾಸಿಗಳು ನೆರೆದಿದ್ದರು. ಗುರುಗಳು 1 ಗಂಟೆ 10 ನಿಮಿಷದಷ್ಟು ಸುದೀರ್ಘವಾದ ಸತ್ಸಂಗವನ್ನು ನಡೆಸಿಕೊಟ್ಟರು ಹಾಗು ಅವರು ತೀರಾ ಆಯಾಸಗೊಂಡಿದ್ದರೂ ಸಹ ಒಳಗೆ ಹೋಗುವ ಮುನ್ನ ಕೆಲವರನ್ನು ಭೇಟಿ ಮಾಡಿದರು.

### ಫೆಬ್ರವರಿ 24–28

ದಿನದಿಂದ ದಿನಕ್ಕೆ ಗುರುಗಳ ಆರೋಗ್ಯದಲ್ಲಿ ಏರಿಳಿತಗಳಾಗುತ್ತಿವೆ. ಗುರುವಾರ ರಾತ್ರಿ, ದೆಹಲಿಯಿಂದ ಅವರ ಮೊಮ್ಮಗ ಭಾರ್ಗವ್ ಬಂದಿದ್ದು, ಮುಂದಿನ ಮೂರು ದಿನಗಳ ಕಾಲ ಗುರುಗಳು ಉಲ್ಲಾಸದಿಂದಿದ್ದರು.

## ಮಾರ್ಚ್ 2014

**'ಗಾಯತ್ರಿ'ಯಲ್ಲಿ ಗುರುಗಳು:** ಮಾರ್ಚ್ 1–9

ಮಾರ್ಚ್‌ನ ಮೊದಲ ವಾರಾಂತ್ಯದಲ್ಲಿ 'ಗಾಯತ್ರಿ'ಯಲ್ಲಿ ಭಾರ್ಗವ್‌ನ ಉಪಸ್ಥಿತಿಯು ಗುರುಗಳಿಗೆ ಉತ್ತಮ ಬದಲಾವಣೆಯನ್ನು ನೀಡಿತು. ಇಡೀ ಕುಟುಂಬಕ್ಕೆ ಅವರೊಡನೆ ಸ್ವಲ್ಪ ಸಮಯ ಕಳೆಯಲು ಸಾಧ್ಯವಾಯಿತು. ಮಾರ್ಚ್ 2ರ ಸಾಯಂಕಾಲ ಭಾರ್ಗವ್ ದೆಹಲಿಗೆ ಮರಳಿದರು.

ಭಾರ್ಗವ್ ತೆರಳಿದ ನಂತರ, ಗುರುಗಳು 'ಗಾಯತ್ರಿ'ಯಲ್ಲಿ ಇನ್ನೊಂದು ವಾರ ಉಳಿದುಕೊಂಡರು. ಅವರು ಆರಾಮದಿಂದಿದ್ದು, ತಾನು ಸ್ವಸ್ಥನಿದ್ದೇನೆಂದು ಅನಿಸಿದಾಗಲೆಲ್ಲ ಸತ್ಸಂಗ ನಡೆಸುತ್ತಿದ್ದರು. ಭೇಟಿಯಾಗುವವರ ಸಂಖ್ಯೆ ವಿರಳವಾಗಿದ್ದು, ಗುರುಗಳಿಗೆ ಕೊಂಚ ವಿಶ್ರಾಂತಿ ದೊರಕಿತು. ವಾರಾಂತ್ಯದಲ್ಲಿ ಅವರು ಮಣಪಾಕ್ಕಂಗೆ ಹೊರಡಲು ಸಿದ್ಧವಾಗಿದ್ದರು.

**ಮರಳಿ ಮಣಪಾಕ್ಕಂಗೆ:** ಸೋಮವಾರ, ಮಾರ್ಚ್ 10, 2014

'ಗಾಯತ್ರಿ'ಯಲ್ಲಿ ಒಂದು ತಿಂಗಳು ತಂಗಿದ ನಂತರ, ಗುರುಗಳು ಮಣಪಾಕ್ಕಂಗೆ ಆಗಮಿಸಿದರು. ಅವರ ಆರೋಗ್ಯದಲ್ಲಿ ನಿಧಾನ ಮತ್ತು ದೃಢವಾಗಿ ಸುಧಾರಣೆ ಕಂಡು ಬಂದಿದ್ದು, ಅವರು ಆರಾಮಕರವಾಗಿ ಓಡಾಡಲು ಶಕ್ತರಾಗಿದ್ದರು. ಗುರುಗಳು ಆಶ್ರಮಕ್ಕೆ ಬಂದಾಗ, ಅಭ್ಯಾಸಿಗಳನ್ನು ಭೇಟಿ ಮಾಡುತ್ತ ಮತ್ತು ಅನೇಕ ನಿರ್ಮಾಣ ಚಟುವಟಿಕೆಗಳನ್ನು ವೀಕ್ಷಿಸುತ್ತ ಗಾಲ್ಫ್ ಗಾಡಿಯಲ್ಲಿ ಸುತ್ತಾಡಿದರು . ಅವರು ಬೈಠಕುಗಳನ್ನು ನೀಡುವುದು, ಅಭ್ಯಾಸಿಗಳ ಭೇಟಿ ಮಾಡುವುದು ಮತ್ತು ಆಡಳಿತಾತ್ಮಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಚುರುಕಾಗಿದ್ದರು. ಅವರು ಕುಟೀರದ ಹೊರಗೆ ಕುಳಿತಾಗಲೆಲ್ಲ, ಅಭ್ಯಾಸಿಗಳ ಗುಂಪು ಅವರನ್ನು ಸುತ್ತುವರೆದು ಕುಳಿತಿರುತ್ತಿತ್ತು.

**ಗುರುಗಳ ಸತ್ಸಂಗ:** ಭಾನುವಾರ, ಮಾರ್ಚ್ 16, 2014

ಮುಂಜಾನೆ 6 ಗಂಟೆಗೆ ಸಿದ್ಧರಾದ ಗುರುಗಳು, "ಇಂದು ನಾನು ಚೆನ್ನಾಗಿರುವೆ" ಎಂದರು. ಅಭ್ಯಾಸಿಯೊಬ್ಬರು ಅಂದು ಹೋಳಿ(ಬಣ್ಣಗಳ ಹಬ್ಬ) ಎಂದು ಹೇಳಿದರು. ಗುರುಗಳು ಪ್ರಕಾಶವದನರಾಗಿ, "ನಾನು ಹೋಗಿ ಸತ್ಸಂಗ ನಡೆಸಿಕೊಡುತ್ತೇನೆ" ಎಂದರು. ಅವರು ಒಂದು ಗಂಟೆಗೂ ದೀರ್ಘವಾದ ಸತ್ಸಂಗವನ್ನು ನಡೆಸಿಕೊಟ್ಟು, ಮತ್ತೆ ಕುಟೀರಕ್ಕೆ ಮರಳಿದರು.

**ಗೀತಾವಾಚನ**

ಸೋ.ಸಂಸ್ಕೃತ ಕಣ್ಣನ್‌ರವರು ನಡೆಸುವ ಗೀತಾವಾಚನದಲ್ಲಿ, 18ನೇ ಅಧ್ಯಾಯದ ಕೊನೆಯ ಭಾಗವು ಅಂದು ಮುಗಿಯುವುದಿತ್ತು. ಒಂದೂವರೆ ಗಂಟೆಯ ಅವಧಿಯಲ್ಲಿ ಅವರು ಅಧ್ಯಾಯದ ಅನೇಕ ಶ್ಲೋಕಗಳನ್ನು ವಿವರಿಸುತ್ತ, ಭಗವಾನ್ ಕೃಷ್ಣನ, "ಎಲ್ಲವನ್ನು ಪರಿತ್ಯಜಿಸಿ, ನನಗೆ ಶರಣಾಗು" ಎಂಬ ಸಂದೇಶದ ಸಾರವನ್ನು ವಿವರಿಸಿದರು. ಗುರುಗಳು ಅತೀವ ಮಗ್ನರಾಗಿ ಇದನ್ನು ವೀಕ್ಷಿಸುತ್ತಿದ್ದರು. ಅಧ್ಯಾಯವು ಪೂರ್ಣಗೊಳ್ಳದ ಕಾರಣ ಅದನ್ನು ಮುಂದಿನ ವಾರಕ್ಕೆ ವಿಸ್ತರಿಸಲಾಯಿತು.





**ಗೃಹಪ್ರವೇಶ:** ಬುಧವಾರ, ಮಾರ್ಚ್ 19, 2014

ಗುರುಗಳು ಒಂದು ಗೃಹಪ್ರವೇಶಕ್ಕೆಂದು ಆಶ್ರಮದ ಹಿಂಭಾಗದಲ್ಲಿರುವ ದ್ವಾರಕಾ ಅಪಾರ್ಟ್‌ಮೆಂಟ್ಸ್‌ಗೆ ಆಗಮಿಸಿದರು. ಅವರು ನೇರವಾಗಿ ಮಾಳಿಗೆಗೆ ತೆರಳಿ, ಒಳಬರುತ್ತಿದ್ದ ಕುಟುಂಬದವರನ್ನು ಕರೆದು ಪ್ರಸಾದವನ್ನು ನೀಡಿ, ಸತ್ಸಂಗವನ್ನು ನಡೆಸಿದರು. ಸತ್ಸಂಗಕ್ಕೆ ಸುಮಾರು 400 ಅಭ್ಯಾಸಿಗಳು ಒಟ್ಟುಸೇರಿದ್ದರು! ಗುರುಗಳು ತಮ್ಮ ಗಾಲಿಕುರ್ಚಿಯಲ್ಲಿ ಮನೆಯಲ್ಲಿ ಓಡಾಡಿದರು, ಮನೆಯಲ್ಲಿ ಸ್ವಲ್ಪ ಸಮಯ ಕಳೆದರು, ಮತ್ತೆ ನಂತರ ಕೆಳಗಿನ ಮಹಡಿಯಲ್ಲಿರುವ ಸೋದರ ಕಮಲೇಶ್‌ರವರ ಮನೆಗೆ ತೆರಳಿದರು.

**ಸೋದರ ಕಮಲೇಶ್‌ರವರ ಮನೆ :** ಮಾರ್ಚ್ 19 ರಿಂದ 25, 2014

ಗುರುಗಳು ಅಲ್ಲಿ ಕೆಲವು ದಿನಗಳ ಕಾಲ ತಂಗಲು ನಿರ್ಧರಿಸಿದರು. ಎಂದಿನಂತೆ ಅಭ್ಯಾಸಿಗಳು ಬೆಳಗ್ಗೆ ಮತ್ತು ಸಾಯಂಕಾಲಗಳಲ್ಲಿ ಬರುತ್ತಿದ್ದರು. ಅವರು ತನ್ನ ಬೆಳಗಿನ ಉಪಾಹಾರದ ನಂತರ ಬೈಠಕ್ ನೀಡುತ್ತಿದ್ದರು ಹಾಗು ಸಂಜೆ ಅವರು ಹಜಾರಕ್ಕೆ ಅಲ್ಲಿ ಸೇರಿದ ಅಭ್ಯಾಸಿಗಳನ್ನು ಭೇಟಿ ಮಾಡಿಬಂದು ನಂತರ ತನ್ನ ಫಿಸಿಯೊಥೆರಪಿಗೆ ತೆರಳುತ್ತಿದ್ದರು. ಭಾನುವಾರದ ತನಕ ಇದೇ ಪರಿಪಾಠವಿದ್ದಿತು.

ಭಾನುವಾರ ಮುಂಜಾನೆ ಸೋದರ ಕಮಲೇಶ್‌ರವರು ಆಶ್ರಮದಲ್ಲಿ ಸತ್ಸಂಗ ನಡೆಸಲು ತೆರಳಿದ ಬಳಿಕ ಗುರುಗಳು ಕೆಳಗಿಳಿದು ಬಂದು ಅಲ್ಲಿ ಉಪಸ್ಥಿತರಿದ್ದವರಿಗಾಗಿ ಸತ್ಸಂಗ ನಡೆಸಿಕೊಟ್ಟರು. ಸುದೀರ್ಘವಾದ ಬೈಠಕಿನ ನಂತರ ಅವರು ಬಳಲಿದ್ದುದು ಎದ್ದುಕಾಣುತ್ತಿತ್ತು ಹಾಗು ಅವರಿಗೆ ಉಸಿರಾಟದಲ್ಲಿ ಸ್ವಲ್ಪ ಕಷ್ಟವೆನಿಸಿತು.

**ಗೀತಾವಾಚನ:** ಭಾನುವಾರ, ಮಾರ್ಚ್ 23, 2014

ಗುರುಗಳು ಸೋ. ಕಮಲೇಶ್‌ರವರ ಮನೆಯಲ್ಲಿಯೇ ಇದ್ದುದರಿಂದ ಆಶ್ರಮದ ಧ್ಯಾನಮಂದಿರದಲ್ಲಿ ನಡೆಯುತ್ತಿದ್ದ ಗೀತಾವಾಚನದ ವಿಡಿಯೋವನ್ನು ಅವರಿಗೆ ನೇರಪ್ರಸಾರ ಮಾಡಲಾಯಿತು. ಇದು ಕಾರ್ಯಕ್ರಮದ ಅಂತಿಮ ಭಾಗವಾಗಿದ್ದು, ಗುರುಗಳು ಅಸ್ವಸ್ಥರಾಗಿದ್ದರೂ ಸಹ ಸಂಪೂರ್ಣವಾಗಿ ಮಗ್ನರಾಗಿ ವೀಕ್ಷಿಸಿದರು. ಗೀತೆಯ ಎಲ್ಲ ಅಧ್ಯಾಯಗಳ ಪಕ್ಷಿನೋಟದೊಂದಿಗೆ ಪ್ರಶ್ನೋತ್ತರಕ್ಕಾಗಿ ಇನ್ನೊಂದು ವಾರದ ಮಟ್ಟಿಗೆ ಕಾರ್ಯಕ್ರಮದ ವಿಸ್ತರಣೆ ಮಾಡಿರುವುದಾಗಿ ಕೊನೆಯಲ್ಲಿ ಪ್ರಕಟಿಸಲಾಯಿತು.

**ಗುರುಗಳ ಅಸ್ವಸ್ಥತೆ:** ಮಾರ್ಚ್ 23ರಿಂದ 31, 2014

ಗುರುಗಳ ಅನಾರೋಗ್ಯದಿಂದಾಗಿ ಕೆಲವು ಪರೀಕ್ಷೆಗಳನ್ನು ಮಾಡಿಸಲಾಯಿತು ಹಾಗೂ ಚಿಕಿತ್ಸೆಯು ಪ್ರಾರಂಭವಾಯಿತು. ಗುರುಗಳಿಗೆ ಕುಟೀರಕ್ಕೆ ಮರಳುವ ಇಚ್ಛೆಯಿತ್ತು ಆದರೆ ಅವರು ಓಡಾಡಲು ತೀರಾ ನಿಶ್ಶಕ್ತರಾಗಿದ್ದರು. ಅವರು ತಮ್ಮ ಶಕ್ತಿಯನ್ನು ಮರಳಿ ಪಡೆಯಲು ಕೆಲವು ದಿನಗಳು ಬೇಕಾದವು, ಮಾರ್ಚ್ 25ಕ್ಕೆ ಅವರು ಕುಟೀರಕ್ಕೆ ಹಿಂತಿರುಗಿದರು.

## ಏಪ್ರಿಲ್ 2014

ಏಪ್ರಿಲ್ ತಿಂಗಳ ಮೊದಲೆರಡು ವಾರಗಳ ಕಾಲ ಗುರುಗಳ ಆರೋಗ್ಯ ಸುಧಾರಿಸಲಿಲ್ಲ. ಕುಟೀರದಲ್ಲಿ ವೈದ್ಯ ತಂಡ ಉಪಸ್ಥಿತವಿದ್ದಿತು. ಭೇಟಿಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಯಿತು. ನೈದಾನಿಕ ಪರೀಕ್ಷೆಯ ಬಳಿಕ ಸೂಕ್ತ ಚಿಕಿತ್ಸೆಯನ್ನು ನೀಡಿದಾಗ ಗುರುಗಳಲ್ಲಿ ನಿಧಾನವಾದ ಆದರೆ ಸ್ಥಿರವಾದ ಸುಧಾರಣೆ ಕಂಡುಬಂತು. ಔಷಧಿಗಳ ಪರಿಣಾಮವಾಗಿ ಆಲಸರಾಗಿದ್ದ ಕಾರಣ ಅವರು ಧಾರಾಳ ವಿಶ್ರಾಂತಿಯಲ್ಲಿದ್ದರು. ಅವರು ಸುಧಾರಿಸಿದಂತೆ, ಕೊಂಚ ಸಮಯ ಹೊರಗೆ ಬಂದು ಕುಟೀರದ ಮುಂಭಾಗದಲ್ಲಿ ಅಥವಾ ಬಾಬೂಜಿ ಮಂಟಪದ ಬಳಿ **ಕುಳಿತು** ಕೊಳ್ಳಲಾರಂಭಿಸಿದರು.

ಬರೋಡಾದಿಂದ ಮೂರು ಸಹೋದರಿಯರು ತಮ್ಮ ಕುಟುಂಬದವರೊಡನೆ ಗುರುಗಳನ್ನು ಭೇಟಿ ಮಾಡಲು ಬಂದಿದ್ದು, ಗುರುಗಳು ಬಲು ಸಂತೋಷದಿಂದ ಅವರೊಡನೆ ಕೊಂಚ ಸಮಯ ಕಳೆದರು.

ಗುರುಗಳ ಅನೌಪಚಾರಿಕ ಸಂಭಾಷಣೆಯಿಂದ ಆಯ್ದ ಕೆಲವು ಮಾತುಗಳು:

“ನಿಜವಾದ ಬಲವು ಮೃದುತ್ವದಲ್ಲಿರುತ್ತದೆ. ದುರ್ಬಲರು ಮಾತ್ರ ಕಠಿಣರಾಗಿರುತ್ತಾರೆ.”

“ನಡತೆ ಮತ್ತು ಚಾರಿತ್ರ್ಯದ ಸುಧಾರಣೆ ಮಾತ್ರ ಪ್ರತ್ಯಕ್ಷ ಬದಲಾವಣೆಯಾಗಿರುತ್ತದೆ.”

“ಕಾರ್ಯವು ಕಡಿಮೆಯಾದಂತೆ ಜವಾಬ್ದಾರಿ ಹೆಚ್ಚುತ್ತದೆ.”

**ತಮಿಳು ನವವರ್ಷ: ಏಪ್ರಿಲ್ 14, 2014**

ಗುರುಗಳು ಬೇಗನೆ ಎದ್ದು, ಕೆಲವು ಅಭ್ಯಾಸಿಗಳನ್ನು ಅಭಿವಾದಿಸಿದರು. ಅವರು ಧ್ಯಾನಮಂದಿರದಲ್ಲಿ ಸತ್ಸಂಗ ನಡೆಸಬೇಕಿದ್ದಿತು ಆದರೆ ಇದ್ದಕ್ಕಿದ್ದಂತೆ ಅವರಲ್ಲಿ ದಣಿವು ಕಾಣಿಸಿಕೊಂಡ ಕಾರಣ ಅದನ್ನು ರದ್ದುಗೊಳಿಸಲು ನಿರ್ಧರಿಸಿದರು. ಅಂದು ಅವರು ಹೆಚ್ಚು ಮಂದಿಯನ್ನು ಭೇಟಿಯಾಗಲಿಲ್ಲ.

**ವಿಷು, ಕೇರಳ ನವವರ್ಷ: ಏಪ್ರಿಲ್ 15, 2014**

ಗುರುಗಳು ಅಂಗಳಕ್ಕೆ ಬಂದರು, ಅಲ್ಲಿ ಕೇರಳದ ಸುಮಾರು ಎಂಭತ್ತು ಅಭ್ಯಾಸಿಗಳು ಹಾಗು ಚೆನ್ನೈನ ಕೆಲವು ಮಲಯಾಳಿಗಳು ‘ವಿಷು’ವನ್ನು ಆಚರಿಸಲು ಸೇರಿದ್ದರು. ಆ ದಿನ ಪ್ರಥಮವಾಗಿ ನೋಡಬೇಕಾದ, ಪವಿತ್ರ





ವಸ್ತುಗಳಾದ ಹೂವು-ಹಣ್ಣು, ತರಕಾರಿಗಳು, ಲೋಹದ ಕನ್ನಡಿ ಮತ್ತು ನಾಣ್ಯಗಳನ್ನು ಒಳಗೊಂಡ 'ವಿಷುಕ್ಕಣಿ'ಯನ್ನು ಸಿದ್ಧಗೊಳಿಸಲು ಗುರುಗಳು ಅನುಮತಿ ನೀಡಿದರು. ಅನಂತರ ಗುರುಗಳು ಬೈಠಕ್ ನೀಡಿದರು. ಆಮೇಲೆ ಸೋ. ಕೃಷ್ಣನ್‌ರವರು ಮಲಯಾಳಂನಲ್ಲಿ ಕಿರುಭಾಷಣವನ್ನು ಮಾಡಿದರು. ಅವರು 'ವಿಷುಕ್ಕಣಿ'ಯಲ್ಲಿರುವ ಕನ್ನಡಿಯನ್ನು ಕಂಡು, ನಾವು ಕನ್ನಡಿಯೊಳಗೆ ನೋಡಿದಾಗಲೆಲ್ಲ ಗುರುಗಳನ್ನು ನಮ್ಮೊಳಗೆ ಕಾಣಬೇಕು ಎಂದರು. ಗುರುಗಳು ವಿಷುಕೈನೀಟ್ಟಂ (ಸಾಂಪ್ರದಾಯಿಕವಾಗಿ ಕುಟುಂಬದ ಹಿರಿಯರು ಕುಟುಂಬದ ಎಲ್ಲ ಸದಸ್ಯರಿಗೆ ನೀಡುವಂಥದು)ನ್ನು ಅಲ್ಲಿ ಸೇರಿದ್ದ ಎಲ್ಲ ಸೋದರ ಸೋದರಿಯರಲ್ಲಿ ನೀಡಿದರು.

**ಭಾನುವಾರ, ಏಪ್ರಿಲ್ 20, 2014:** ಗುರುಗಳು ಧ್ಯಾನಮಂದಿರದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು. ಅವರು ಮುಂಜಾನೆ 7.10ಕ್ಕೆ ಆಗಮಿಸಿ, ಸತ್ಸಂಗ ಪ್ರಾರಂಭಿಸುವ ಮುನ್ನ ಹತ್ತು ನಿಮಿಷಕ್ಕೂ ಮಿಗಿಲಾಗಿ ಸಹನೆಯಿಂದ ಕಾಯುತ್ತಿದ್ದರು. ಸತ್ಸಂಗದ ನಂತರ, ಅವರು ಮೂರು ವಿವಾಹಗಳನ್ನು ನೆರವೇರಿಸಿದರು. ಪ್ರಕಟಣೆಗಳನ್ನು ನೀಡುವಾಗ, ಪ್ರಕಟಕರು ಕೊನೆಯಲ್ಲಿ, "ದಯವಿಟ್ಟು ಧ್ಯಾನಮಂದಿರದಿಂದ ಗುರುಗಳು ಹೊರಹೋಗುವ ತನಕ ಕುಳಿತುಕೊಂಡಿರಿ" ಎನ್ನುವುದು ವಾಡಿಕೆ. ಆದರೆ ಅಂದು ಆ ಪ್ರಕಟಣೆ ತಪ್ಪಿತ್ತು. ಹಾಗಾಗಿ ಗುರುಗಳು ಸೋ. ಪ್ರಕಾಶ್‌ರವರನ್ನು ಕರೆದು, ಹಾಗೆ ಹೇಳುವಂತೆ ನೆನಪಿಸಿದರು. ಕುಟೀರದಲ್ಲಿ, ಗುರುಗಳು ಕೊಂಚ ಕಾಲ ಗೀತಾವಾಚನವನ್ನು ಆಲಿಸಿ ನಂತರ ವಿಶ್ರಾಂತಿಗಾಗಿ ತೆರಳಿದರು.

**ಕೊಲ್ಲಿ ರಾಷ್ಟ್ರಗಳ ವಿಚಾರಸಂಕಿರಣ:** ಮಾರ್ಚ್ 25–30, 2014

ಮಧ್ಯಪ್ರಾಚ್ಯ ರಾಷ್ಟ್ರಗಳಿಂದ ಸುಮಾರು 400 ಅಭ್ಯಾಸಿಗಳು ಹಾಗು 100 ಮಕ್ಕಳು ವಿಚಾರಸಂಕಿರಣದಲ್ಲಿ ಭಾಗವಹಿಸಿದರು. 25ರಂದು, ಸೋ. ಕಮಲೇಶ್‌ರವರು ಮುಂಜಾನೆ 9 ಗಂಟೆಗೆ ಸತ್ಸಂಗವನ್ನು ನಡೆಸಿ, ಸಾಧನೆಯ ಪ್ರಾಮುಖ್ಯತೆಯ ಕುರಿತ ಅದ್ಭುತವಾದ ಉಪನ್ಯಾಸದೊಂದಿಗೆ ವಿಚಾರಸಂಕಿರಣವನ್ನು ಉದ್ಘಾಟಿಸಿದರು. ಪ್ರತಿನಿತ್ಯ ಪೂರ್ವಾಹ್ನದಲ್ಲಿ ಒಂದು ಉಪನ್ಯಾಸ ಹಾಗು ಅಪರಾಹ್ನಗಳಲ್ಲಿ ಅನೇಕ ವಿಷಯಗಳ ಪ್ರಸ್ತುತಿಗಳಿರುತ್ತಿದ್ದುವು. ಮುಕ್ತಾಯದ ದಿನ 29ರಂದು ಸೋ. ಕಮಲೇಶ್‌ರವರು ಭಾಗವಹಿಸಿದವರನ್ನುದ್ದೇಶಿಸಿ ನೀಡಿದ ಭಾಷಣದಲ್ಲಿ ಕ್ರಮಬದ್ಧ ಸಾಧನೆಯ ಅಗತ್ಯವನ್ನು ಹೇಳಿದರು ಹಾಗು 'ಎಗ್ರಿಗೋರ್' ಅಂದರೆ ಸಾಮೂಹಿಕ ಕಂಪನವೆಂದೂ, ಅದರಿಂದ ಅಧಿಕ ಜಾಗೃತ ಮನುಕುಲವು ಉದಿಸಿ ವಿಶ್ವವು ಉತ್ತಮಗೊಳ್ಳಬಲ್ಲುದೆಂದೂ ಹೇಳಿದರು. 30ರಂದು, ವೈದ್ಯರ ಸಲಹೆಯನ್ನು ಮೀರಿ, ತಮ್ಮ ಜ್ವರ ಮತ್ತು ಅಶಕ್ತತೆಯನ್ನು ಲೆಕ್ಕಿಸದೆ,ಗುರುಗಳು ಸತ್ಸಂಗದ ನಂತರ ಎಲ್ಲ ಅಭ್ಯಾಸಿಗಳನ್ನು ಭೇಟಿ ಮಾಡಿದರು.



**ಐರೋಪ್ಯ ಪ್ರಶಿಕ್ಷಕರ ವಿಚಾರಸಂಕಿರಣ, ಮಣಪಾಕ್ಕಂ,** ಫೆಬ್ರವರಿ 15–20, 2014

ಈ ವಿಚಾರಸಂಕಿರಣದಲ್ಲಿ ಯುರೋಪಿನ ಸುಮಾರು ಎಲ್ಲ ದೇಶಗಳಿಂದ 310 ಅಭ್ಯಾಸಿಗಳು ಪಾಲ್ಗೊಂಡಿದ್ದರು. ಇದು ಅವರನ್ನು ತಮ್ಮ ಆಂತರ್ಯದೊಳಗೆ ಆತ್ಮಪರಿಶೀಲನೆಗೆ ಒಯ್ದಿತ್ತು. ಗುರುಗಳು ಸಂಸ್ಕರಣೆಯ ಕುರಿತು ಮಾತನಾಡಿದರು: ಸೃಷ್ಟಿಯ ಸಕಲ ಕ್ಷೇತ್ರಗಳಲ್ಲಿ ಗುರುಗಳು ಅನುಭವಿಗಳಾಗಿರಬೇಕು ಹಾಗು ಸೂಕ್ಷ್ಮ ಮತ್ತು ನಿಖರವಾದ ವಿವೇಚನಾ ಸ್ತರಗಳನ್ನು ಸಾಧಿಸಲು ತಮ್ಮ ಕೆಲಸವನ್ನು ಪ್ರೀತಿಸಬೇಕು. ನಿರ್ಲಕ್ಷ್ಯ ಮನೋಭಾವದಿಂದ ಮಾಡಿದುದಕ್ಕೂ ಮತ್ತು ಪ್ರೇಮ, ಶ್ರದ್ಧೆಯಿಂದ ಮಾಡಿದುದಕ್ಕೂ ಇರುವ ವ್ಯತ್ಯಾಸವನ್ನು ಅವರು ವಿವರಿಸಿದರು.

ಸೋದರ ಕಮಲೇಶ್‌ರವರ ಇತರ ಉಪನ್ಯಾಸಗಳು, ತನಗಿಂತ ಹೆಚ್ಚಾಗಿ ಪ್ರತಿಯೊಬ್ಬರನ್ನು ಪ್ರೀತಿಸಿದ ಲಾಲಾಜಿಯವರ ಗುಣ, ಬಾಬೂಜಿಯವರು ಹೇಗೆ ಪ್ರಜ್ಞೆ ಮತ್ತು ಸಂವೇದನಾಶೀಲತೆಯ ಅತಿ ಸೂಕ್ಷ್ಮಮಟ್ಟಗಳನ್ನು ಪಡೆದರೆಂಬುದನ್ನು ವಿವರಿಸಿದವು. ತಾವು ಈಗಲೂ ಹೇಗೆ ತಮ್ಮ ಧಾರ್ಮಿಕ ಹಿನ್ನೆಲೆಗಳಿಂದ ಪ್ರಭಾವಿತರಾಗಿರಬಹುದು ಎಂಬುದನ್ನು ಪ್ರಶಿಕ್ಷಕರು ಸಣ್ಣ ಗುಂಪುಗಳಲ್ಲಿ ಚರ್ಚಿಸಿದರು.

ಒಂದು ಹಳೆಯ ವರ್ಣಚಿತ್ರವನ್ನು ಅದರ ಮೂಲರೂಪಕ್ಕೆ ಪುನರ್ನವೀಕರಿಸುವಲ್ಲಿ ಅಗತ್ಯವಾಗುವ ಸೂಕ್ಷ್ಮತೆ, ಲಕ್ಷ್ಯ ಹಾಗು ಕುಶಲತೆಯಿಂದ ತಮ್ಮನ್ನು ಗುರುಗಳು ಪ್ರೇರಿಸಿರುವಂತೆ ಎಲ್ಲರಿಗೂ ಭಾಸವಾಯಿತು. ನಿಸ್ಸಹಾಯಕ ಮತ್ತು ಹತಾಶ ವ್ಯಕ್ತಿಯನ್ನು ಅವನ ಮೂಲ ದೈವಿಕ ಸ್ಥಿತಿಗೆ ಮರಳಿ ತರಬಲ್ಲ ಭವ್ಯವಾದ ಸಾಧ್ಯತೆ ಸಹಜಮಾರ್ಗದಲ್ಲಿದೆ.

*"ತನ್ನ ಕಣ್ಣು ತನ್ನ ಅಂತರಾತ್ಮನತ್ತ ತಿರುಗಿದಾಗ ಮಾತ್ರ ಒಬ್ಬ ಮನುಷ್ಯ ನಿಜವಾದ ಮನುಷ್ಯನಾಗಿರಬಲ್ಲ. ಪರತತ್ತ್ವದ ನಿಜವಾದ ಅನ್ವೇಷಣೆ ಅಲ್ಲಿರುತ್ತದೆ. ಅದಕ್ಕೆ ಲಿಪ್ತನಾದಾತ, ಯಾವುದರಿಂದ ಪ್ರತಿಯೊಂದೂ ತಾನಾಗಿ ಅವತರಣಗೊಂಡಿದೆಯೋ ಆ ಮಂಡಲದಲ್ಲಿ ತನ್ನ ಕಾಲೂರುತ್ತಾನೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಆತ ಪ್ರಧಾನ ಮೂಲದೊಡನೆ ತನ್ನ ಸಂಪರ್ಕವನ್ನು ಏರ್ಪಡಿಸಿಕೊಳ್ಳುತ್ತಾನೆ. ಆಗ ಅಲ್ಲಿ ಉಳಿಯುವುದು ಅದರ ವಿಸ್ತರಣೆ ಮಾತ್ರವಾಗಿದ್ದು, ಅದಕ್ಕೆ ಹೇಳಲಾಗಿರುವ ಸಾಧನೆ ಸಾಕಾಗುತ್ತದೆ."*

*ಬಾಬೂಜಿ ಮಹಾರಾಜ್, ರಾಮಚಂದ್ರರ ಸಮಗ್ರಕೃತಿಗಳು, ಸಂಪುಟ 2*

# ಮಾತಿನ ಪ್ರಸರಣ

## ಅಹಮದಾಬಾದ್, ಗುಜರಾತ್





ಮಾರ್ಚ್ 7ರಂದು ಅಪರಾಹ್ನ 5.30ಕ್ಕೆ ಜೋಗರ್ಸ್ ಪಾರ್ಕ್‌ನಲ್ಲಿ 'ಭಾರತೀಯ ಯೋಗ ಸಂಸ್ಥಾನ'(ಇದು ಅಭ್ಯಾಸಿಯಿಂದ ನಡೆಸಲ್ಪಡುತ್ತಿದೆ) ವು ನಡೆಸುತ್ತಿರುವ ಯೋಗ ತರಗತಿಗಳಲ್ಲಿ ಹಾಜರಿರುವವರಿಗಾಗಿ 'ಆರೋಗ್ಯಕರ ಜೀವನಕ್ಕಾಗಿ ಸಂತಸದಿಂದ ಬದುಕಿರಿ' ಎನ್ನುವ ಕಾರ್ಯಕ್ರಮವೊಂದು ನಡೆಸಲ್ಪಟ್ಟಿತು.

ಡಾ. ವಿನೋದ್ ಅಗರ್‌ವಾಲ್ ಮತ್ತು ಸೋ. ಭದ್ರೇಶ್‌ರವರು 'ಧ್ಯಾನದ ಪ್ರಾಮುಖ್ಯತೆ', ' ಮಾನವ ಜೀವನದಲ್ಲಿ ಗುರುವಿನ ಪಾತ್ರ' ಮತ್ತು ' ಸಹಜಮಾರ್ಗದ ಪ್ರಮುಖ ಲಕ್ಷಣಗಳು' ಎಂಬ ವಿಷಯಗಳ ಬಗ್ಗೆ ಮಾತನಾಡಿದರು. ಭಾಗವಹಿಸಿದ 90 ಮಂದಿಯಲ್ಲಿ ಸುಮಾರು 40 ಮಂದಿ ಮಿಷನ್ನಿನ ಬಗ್ಗೆ ಆಸಕ್ತಿ ತೋರಿಸಿದರು ಮತ್ತು ಹಲವಾರು ಪ್ರಶ್ನೆಗಳಿಗೆ ಪ್ರಶಿಕ್ಷಕರುಗಳು ಉತ್ತರಿಸಿದರು.

## ತಾಡಪತ್ರಿ, ಅನಂತಪುರ ಜಿಲ್ಲೆ, ಆಂಧ್ರಪ್ರದೇಶ

ಕಡಪ ಮತ್ತು ತಾಡಪತ್ರಿಯ ವಿವಿಧ ಕಾಲೇಜುಗಳಲ್ಲಿ ಮಾರ್ಚ್ ತಿಂಗಳ ಅವದಿ ಯಲ್ಲಿ ಕೆಲವು ಪರಿಚಯಾತ್ಮಕ ಸಭೆಗಳು ನಡೆದಿದ್ದು ಇದಕ್ಕೆ ಅಮೋಘ ಪ್ರತಿಸ್ಪಂದನೆ ವ್ಯಕ್ತವಾಗಿತ್ತು. 275ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳು ಆಭ್ಯಾಸ ಆರಂಭಿಸುವಲ್ಲಿ ಆಸಕ್ತಿ ತೋರಿಸಿದರು ಮತ್ತು ಅವರಲ್ಲಿ ಸುಮಾರು 170 ಮಂದಿ ಗೆ ಆರಂಭಿಕ ಬೈಠಕ್‌ಗಳನ್ನು ನೀಡಲಾಯಿತು. ಈ ಉನ್ನತಾಕಾಂಕ್ಷಿಗಳಲ್ಲಿ 120 ಮಂದಿ ತಾಡಪತ್ರಿ ಎಂಜಿನಿಯರಿಂಗ್ ಕಾಲೇಜಿನವರಾಗಿದ್ದರು. ಈ ವಿದ್ಯಾರ್ಥಿಗಳಿಗೆ ಪ್ರಾರಂಭಿಕ ಬೈಠಕ್‌ಗಳನ್ನು ಕೊಡಲು ಆಂಧ್ರಪ್ರದೇಶದ ವಿವಿಧ ಕಡೆಗಳಿಂದ ಸುಮಾರು ಇಪ್ಪತ್ತು ಮಂದಿ ಪ್ರಶಿಕ್ಷಕರು ಬಂದು ಸೇರಿದ್ದರು. ಈ ಸಭೆಗಳನ್ನು ಆಯೋಜಿಸಿದ ಪ್ರಶಿಕ್ಷಕರು ಮತ್ತು ಸ್ವಯಂಸೇವಕರುಗಳಿಗೆ, ಈ ಆಕಾಂಕ್ಷಿಗಳನೇಕರಲ್ಲಿ ಒಂದು ಸಿದ್ಧತೆಯಿದ್ದು ಗುರುಗಳ ಕಾರ್ಯವು ವಿಕಸಿತವಾಗುತ್ತಿರುವಂತೆ ಅನಿಸಿತು. ತಾಡಪತ್ರಿಯಲ್ಲಿ ಕಾಲೇಜೊಂದರ ಆಡಳಿತ ಮಂಡಳಿಯು ತಮ್ಮ ಸಂಸ್ಥೆಯಲ್ಲಿ ಪ್ರಾರಂಭಿಕ ಬೈಠಕ್‌ಗಳನ್ನು ಏರ್ಪಡಿಸಿತ್ತು ಮತ್ತು ಬುಧವಾರದ ಸತ್ಸಂಗಗಳನ್ನು ನಡೆಸುವುದಕ್ಕಾಗಿ ಒಂದು ಕೋಣೆಯನ್ನೂ ಒದಗಿಸಿತ್ತು. ಹದಿನೆಂಟರ ಕೆಳಗಿನ ಅನೇಕ ವಿದ್ಯಾರ್ಥಿಗಳು ಅಭ್ಯಾಸವನ್ನು ಪ್ರಾರಂಭಿಸುವ ಬಗ್ಗೆ ಇಚ್ಛಿಸುತ್ತಿದ್ದು, ವಯೋಮಿತಿಯ ಕಾರಣದಿಂದಾಗಿ ನಿರಾಶೆಗೊಂಡಿದ್ದರು.

## ಕಡಪ

ಕಡಪದಲ್ಲಿ ಒಂದು ದಂತವೈದ್ಯ ವಿದ್ಯಾಲಯ, ತಾಂತ್ರಿಕ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯಗಳಲ್ಲಿ ಹಾಗೂ ಸ್ಥಳೀಯ ಬ್ಯಾಂಕ್ ಮತ್ತು ಯೋಗಕೇಂದ್ರವೊಂದರಲ್ಲಿ ಐದು ಪರಿಚಯಾತ್ಮಕ ಸಭೆಗಳನ್ನು ನಡೆಸಲಾಯಿತು. ಕೆಲವು ಪರಿಚಯಾತ್ಮಕ ಸಭೆಗಳು ವಿಶೇಷತ: ಕಾಲೇಜುಗಳಲ್ಲಿ ಎಷ್ಟು ಚೆನ್ನಾಗಿ ಸ್ವೀಕೃತವಾದುವೆಂದರೆ, ಬಹುತೇಕ ಐವತ್ತು ಮಂದಿ ವಿದ್ಯಾರ್ಥಿಗಳು ಶೀಘ್ರದಲ್ಲೇ ಸಹಜಮಾರ್ಗ ಅಭ್ಯಾಸವನ್ನು ಪ್ರಾರಂಭಿಸಲಿದ್ದಾರೆ. ಇನ್ನೊಂದು ಪರಿಚಯಾತ್ಮಕ ಸಭೆಯನ್ನು ಕಡಪಜಿಲ್ಲೆಯ ಪುಲಿವೇಂಡ್ಲದಲ್ಲಿ ಆಶ್ರಮದ ಆವರಣದಲ್ಲಿ ನಡೆಸಲಾಗಿತ್ತು. ಇದೂ ಚೆನ್ನಾಗಿ ಸ್ವೀಕೃತವಾಯಿತು. ವೇಂಪಳ್ಳಿ, ಪುಲಿವೇಂಡುಲ, ಕಡಪ, ತಾಡಪತ್ರಿ, ಹೈದರಾಬಾದ್‌ಗಳಿಂದ ಪ್ರಶಿಕ್ಷಕರು ಮತ್ತು RTPP, ಕದಿರಿ ಗಳಿಂದ ಬಂದ ಕೆಲ ಅಭ್ಯಾಸಿಗಳು ಬೈಠಕ್‌ಗಳನ್ನು ಆಯೋಜಿಸುವಲ್ಲಿ ನೆರವಾದರು.

## ಕೋರುಟ್ಲ ಮತ್ತು ಮೇಟ್‌ಪಲ್ಲಿ ಕೇಂದ್ರಗಳು, ಉತ್ತರ ಆಂಧ್ರಪ್ರದೇಶ

ಆಂಧ್ರಪ್ರದೇಶ ಉತ್ತರವಲಯದ ಪ್ರವಾಸಾವಧಿಯಲ್ಲಿ ವಲಯ ಸಂಚಾಲಕರಾದ ಸೋ. ಮಧು ಕೋತಪಲ್ಲಿ ಮತ್ತು ಅವರ ತಂಡವು ಜಾಗಿತ್ಯಾಲದ ಸ್ಥಳೀಯ ಪ್ರಶಿಕ್ಷಕರೊಂದಿಗೆ ಜಾಗಿತ್ಯಾಲದಿಂದ 5 ಕಿ.ಮೀ. ತ್ರಿಜ್ಯದಲ್ಲಿರುವ ಕೊರುಟ್ಲ ಮತ್ತು ಮೇಟ್‌ಪಳ್ಳಿಗಳಲ್ಲಿ ಎರಡು ಹೊಸಕೇಂದ್ರಗಳನ್ನು ಪ್ರಾರಂಭಿಸಿದರು. ಹಿಂದಿ ರುಗುವ ದಾರಿಯಲ್ಲಿ ತಂಡವು ಒಂದು ಚಹದಂಗಡಿಯಲ್ಲಿ ತಡೆದು ಗುರುಕೃಪೆಯಿಂದ ಈ ಹೊಸಕೇಂದ್ರಗಳು ಊರ್ಜಿತವಾಗಲೆಂದು ಪ್ರಾರ್ಥಿಸಿತು. ಒಂದು ತಿಂಗಳೊಳಗಾಗಿ ಸೋ. ಮಂಚಾಲ ಕೃಷ್ಣರವರು ಈ ಹೊಸಕೇಂದ್ರಗಳಲ್ಲಿ ಪರಿಚಯಾತ್ಮಕ ಸಭೆಗಳನ್ನು ಏರ್ಪಡಿಸಿದರು. ಕೊರುಟ್ಲದಲ್ಲಿ ಸೋ. ಕೃಷ್ಣ ರಾವ್‌ರವರು ಸಹಜಮಾರ್ಗವನ್ನು ಪರಿಚಯಿಸಿದರು ಮತ್ತು ಇಪ್ಪತ್ತು ಜನರು ಪ್ರಾರಂಭಿಕ ಬೈಠಕ್‌ಗಳನ್ನು ತೆಗೆದುಕೊಂಡರು. ಮೇಟ್ ಪಳ್ಳಿಯಲ್ಲಿ ಸೋ.









ಸಿಂಗಮರಾಜು ಸಾಧನಾಪದ್ಧತಿಯ ಬಗ್ಗೆ ಮಾತನಾಡಿದರು ಮತ್ತು ಹತ್ತು ಹೊಸ ಅಭ್ಯಾಸಿಗಳನ್ನು ಸಾಧನಾಪದ್ಧತಿಗೆ ಸ್ವಾಗತಿಸಿದರು. ಈ ಹುರುಪಿನಲ್ಲಿ ಜಾಗಿತ್ಯಾಲ, ಕರೀಂನಗರ, ಕೊತ್ತಗುಡಾಮ್ ಮತ್ತು ಸಿದ್ದಿಪೇಟ್‌ಗಳಲ್ಲಿ ಇನ್ನಷ್ಟು ಪರಿಚಯಾತ್ಮಕ ಸಭೆಗಳನ್ನು ನಡೆಸಲಾಯಿತು. ಸುಮಾರು 100 ಹೊಸ ಅಭ್ಯಾಸಿಗಳು ಆರಂಭಿಕ ಬೈಠಕ್‌ಗಳನ್ನು ತೆಗೆದುಕೊಂಡರು. ಎಂದಿನಂತೆ ಪ್ರಾಮಾಣಿಕ ಪ್ರಾರ್ಥನೆ ನಿಜವಾಗಿಯೂ ಕೆಲಸಮಾಡಿತ್ತು.

## ಪಾಲಕ್ಕಾಡ್, ಕೇರಳ

ಪಾಲಕ್ಕಾಡ್ ಆಶ್ರಮದಿಂದ ಸುಮಾರು 25 ಕಿ.ಮೀ. ದೂರದಲ್ಲಿರುವ ವಡವಣ್ಣೂರಿನಲ್ಲಿ ನಾಯರ್ ಸರ್ವಿಸ್ ಸೊಸೈಟಿಯಲ್ಲಿ ಸೋದರಿ ಶ್ಯಾಮಲಾ ಮೆನನ್‌ರವರು ಪರಿಚಯಾತ್ಮಕ ಸಭೆಯೊಂದನ್ನು ನಡೆಸಿಕೊಟ್ಟರು. ಕೆಲ ಅಭ್ಯಾಸಿಗಳೂ ಸೇರಿದಂತೆ ಇಪ್ಪತ್ತಮೂರು ಮಂದಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕೇಂದ್ರಸಂಚಾಲಕರಾದ ಸೋ. ಕೃಷ್ಣನ್ ಕೆ.ಟಿ.ರವರು 'ಧರ್ಮ ಮತ್ತು ಅಧ್ಯಾತ್ಮ'ದ ಬಗ್ಗೆ ಮಾತನಾಡಿ ಮಾನವ ಜೀವನದಲ್ಲಿ ಅಧ್ಯಾತ್ಮದ ಪ್ರಾಮುಖ್ಯತೆಯನ್ನು ವಿವರಿಸಿದರು. ಸೋ. ಮುರಲೀಧರನ್ ಎಮ್.ರವರು ಮಾನವ ಜನ್ಮದ ಉದ್ದೇಶದ ಬಗ್ಗೆ ಮಾತನಾಡಿ ಗುರಿಯನ್ನು ಸಾಧಿಸುವಲ್ಲಿ ಅಧ್ಯಾತ್ಮದ ಪಾತ್ರವನ್ನು ವಿವರಿಸಿದರು. ಇದನ್ನನುಸರಿಸಿದಂತೆ ಒಂದು ಪ್ರಶ್ನೋತ್ತರ ಕಾರ್ಯಕ್ರಮವಿತ್ತು.

## ಖರಗಪುರ, ಪಶ್ಚಿಮ ಬಂಗಾಳ

ಮಾರ್ಚ್ 8ರಂದು ಖರಗಪುರದ ಸಮೀಪದ ರೂಪನಾರಾಯಣಪುರದಲ್ಲಿನ ಟಾಟಾ ಹಿತಾಚಿ ಸ್ಥಾವರದ ಸುಮಾರು ಎಪ್ಪತ್ತೈದು ಉದ್ಯೋಗಿಗಳಿಗಾಗಿ ಧ್ಯಾನದಅರಿವಿನ ಮೇಲೆ ಎರಡು ಗಂಟೆಗಳ ಕಾರ್ಯಕ್ರಮವೊಂದನ್ನು ನಡೆಸಲಾಯಿತು. ಇದನ್ನು ಸೋದರಿ ಶ್ರೀಲತಾರವರು ಸಂಘಟಿಸಿದ್ದರು ಮತ್ತು ಸೋದರಿ ಚಂದ್ರಕಾಂತ ಅರೋರಾ, ಸೋದರರಾದ ಸಿ.ಎಸ್.ಆರ್. ಮೂರ್ತಿ, ಬಿ.ಬಿ.ಬೆಹ್‌ರಾ ಮತ್ತು ಇತರ ಸ್ವಯಂಸೇವಕರು ಇದನ್ನು ನಡೆಸಿಕೊಟ್ಟರು. ಭಾಷಣಗಾರರು ಸಂತುಲಿತ ಜೀವನದ ಅಗತ್ಯ ಹಾಗೂ ಪ್ರಾಮುಖ್ಯತೆ ಮತ್ತು ಅದನ್ನು ಸಾಧಿಸುವಲ್ಲಿ ಅಧ್ಯಾತ್ಮ ಹೇಗೆ ಸಹಾಯ ಮಾಡಬಲ್ಲುದು ಎಂಬುದನ್ನು ವಿವರಿಸಿದರು. ಅವರು ಸಾಧನಾಪದ್ಧತಿಯನ್ನು ಸಂಕ್ಷಿಪ್ತವಾಗಿ ವಿವರಿಸಿದರು. ನಿರ್ಮಲವಾದ ಆಧ್ಯಾತ್ಮಿಕ ಪರಿಸರವನ್ನು ಅನುಭವಿಸಲು ಖರಗಪುರ ಕೇಂದ್ರಕ್ಕೆ ಭೇಟಿ ನೀಡಿರೆಂದು ಎಲ್ಲರನ್ನೂ ಆಮಂತ್ರಿಸುವುದರೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

## ಮೈಸೂರು, ಕರ್ನಾಟಕ

ಫೆಬ್ರುವರಿಯಲ್ಲಿ ಸೋದರ ದೊರೈಯವರು (ಜೊತೆ ಕಾರ್ಯದರ್ಶಿ) ಮೈಸೂರಿನಲಿ ್ಲನ ಕರ್ನಾಟಕ ಪೊಲೀಸ್ ಅಕಾಡೆಮಿಗೆ ಭೇಟಿಯಿತ್ತರು. ಅವರ ಭೇಟಿಯ ಅವದಿಯಲ್ಲಿ ಫೆಬ್ರುವರಿ 16 – 17ರಂದು ಎರಡು ಪರಿಚಯಾತ್ಮಕ ಸಭೆಗಳು ನಡೆದವು. ಒಟ್ಟು 120 ಪ್ರೊಬೆಷನರಿ ಸಬ್‌ಇನ್‌ಸ್ಪೆಕ್ಟರ್‌ಗಳು ಭಾಗವಹಿಸಿದ್ದು, ಅವರಲ್ಲಿ 33 ಪ್ರಶಿಕ್ಷಣಾರ್ಥಿಗಳು ಅಭ್ಯಾಸ ಪ್ರಾರಂಭಿಸಿದರು. ಎಪ್ರಿಲ್ ಕೊನೆಯೊಳಗೆ ಎಲ್ಲಾ ಪ್ರಶಿಕ್ಷಣಾರ್ಥಿಗಳು ಮತ್ತು ಕೆಲವರು ಅಧಿಕಾರಿಗಳೂ ಪ್ರಾರಂಭಿಸಲಿದ್ದಾರೆ. ಮುಂದಿನ ಎಂಟು ತಿಂಗಳುಗಳ ಕಾಲ ಪ್ರಶಿಕ್ಷಣಾರ್ಥಿಗಳು ಪ್ರಶಿಕ್ಷಣ ಸಂಸ್ಥೆಯಲ್ಲಿರುವರು. ನಿಯತವಾದ ರವಿವಾರದ ಸತ್ಸಂಗಗಳನ್ನು ಮತ್ತು ವೈಯಕ್ತಿಕ ಬೈಠಕ್‌ಗಳನ್ನು ಅವರ ಕ್ಯಾಂಪಸ್‌ನಲ್ಲಿ ಆಯೋಜಿಸಲಾಗಿದೆ. ಅವರ ಪ್ರಶಿಕ್ಷಣ ಸಂಪೂರ್ಣವಾದ ಬಳಿಕ ಅವರು ಕರ್ನಾಟಕದ ವಿವಿಧ ಭಾಗಗಳಲ್ಲಿ ನೇಮಕಮಾಡಲಾಗುವುದು. ಈ ಘಟನೆಯಲ್ಲಿ ಮೈಸೂರಿನಿಂದ ಎಂಟು ಮಂದಿ ಪ್ರಶಿಕ್ಷಕರು ಭಾಗವಹಿಸಿದರು.

## ತಮಿಳ್ನಾಡು

ಮಾರ್ಚ್ 16ರಿಂದ 21ರ ವರೆಗೆ ತಮಿಳ್ನಾಡಿನ ತಂಜಾವೂರು, ತೂತುಕುಡಿ ಮತ್ತು ತಿರುನಲ್ವೇಲಿ ಜಿಲ್ಲೆಗಳ ತನ್ನ ಪ್ರವಾಸದಲ್ಲಿ ಸೋದರ ಎ.ಪಿ ದೊರೈ(ಜೊತೆ ಕಾರ್ಯದರ್ಶಿ)ಯವರು ಅನೇಕ ಕೇಂದ್ರಗಳಿಗೆ ಭೇಟಿ ನೀಡಿದರು, ಅಭ್ಯಾಸಿಗಳೊಂದಿಗೆ ಮಾತುಕತೆಯನ್ನಾಡಿದರು ಮತ್ತು ಪರಿಚಯಾತ್ಮಕ ಸಭೆಗಳನ್ನೂ ನಡೆಸಿಕೊಟ್ಟರು.

ಪ್ರಶಿಕ್ಷಕರುಗಳಾದ ಸುಬ್ರಮಣಿಯನ್ ಮತ್ತು ಮುರುಗರಸನ್‌ರವರು ತಂಜಾವೂರಿನಿಂದ 15 ಕಿ.ಮೀ. ದೂರವಿರುವ ಸರಕಾರಿ ಸಕ್ಕರೆ ಕಾರ್ಖಾನೆಯ ಉದ್ಯೋಗಸ್ಥರ ಸಂಘದಲ್ಲಿ, ಕಾರ್ಯಕ್ರಮವೊಂದನ್ನು ಸಂಘಟಿಸಿದ್ದು ಅದರಲ್ಲಿ 30 ಉದ್ಯೋಗಿಗಳು ಮತ್ತು ಅವರ ಕುಟುಂಬ ಸದಸ್ಯರು ಭಾಗವಹಿಸಿದ್ದರು. ಶೀಘ್ರವೇ ಐದು ಪ್ರಾರಂಭಿಕ ಬೈಠಕ್‌ಗಳನ್ನು ಕೊಡಲಾಯಿತು. ತಂಜಾವೂರಿನ VETRI IAS ನ ಅಧ್ಯಯನ ತಂಡದ ಸುಮಾರು ಎಂಭತ್ತು ವಿದ್ಯಾರ್ಥಿಗಳಿಗೂ ಸಹಜಮಾರ್ಗವನ್ನು ಪರಿಚಯಿಸಲಾಯಿತು.

ತೂತುಕುಡಿಯ V.O.C ಶಿಕ್ಷಣ ಮಹಾವಿದ್ಯಾಲಯದಲ್ಲಿ 120 ಪ್ರಶಿಕ್ಷಣಾರ್ಥಿಗಳು ಮತ್ತು ಸ್ಪಿಕ್‌ನಗರ್ ಸಮೀಪದ ಮುತ್ಯಾನಗರದಲ್ಲಿ ಇಪ್ಪತ್ತು ಮಹಿಳೆಯರು ಪರಿಚಯಾತ್ಮಕ ಸಭೆಯಲ್ಲಿ ಭಾಗವಹಿಸಿ ಭಾಷಣವನ್ನು ಆಲಿಸಿದ್ದು ಐದು ಮಂದಿ ಆ ಕೂಡಲೇ ಪ್ರಾರಂಭಿಕ ಬೈಠಕ್‌ಗಳನ್ನು ಪಡೆದುಕೊಂಡರು.

ಶ್ರೀವೈಕುಂಠಮ್‌ನಲ್ಲಿ KGS ಕಲಾವಿದ್ಯಾಲಯದಲ್ಲಿ ಮತ್ತು ವಡಕಾಂಗುಲಮ್‌ನ ಅರುಲ್ ತಾಂತ್ರಿಕ ಮಹಾವಿದ್ಯಾಲಯ ಮತ್ತು ರಾಜಾಸ್ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ತಿರುಚೆಂಡೂರ್ ಮತ್ತು ಉದಂಗುಡಿಯ ನಡುವಿನ ಕಾಂಚನ್‌ವಿಲ್ಲೈನಲ್ಲಿ ಸರ್ವೈಟ್ ಕಾನ್ವೆಂಟ್ ಮತ್ತು ಶಾಲೆಗಳಿಗೆ ಭೇಟಿ ನೀಡಲಾಗಿದ್ದು ಅಲ್ಲಿ ಸೋದರಿ ಆಕ್ವಿಲಿನಾ (ಪ್ರಶಿಕ್ಷಕಿ) ಯೇಸುವಿನ ಬೋಧನೆಗಳಿಂದ ಸಹಜಮಾರ್ಗ ಸಾಧನೆಯ ಕಡೆಗೆ ಬದಲಾವಣೆ ಎಂಬ ವಿಷಯದಲ್ಲಿ ಒಂದು ಉಪನ್ಯಾಸವನ್ನು ಏರ್ಪಡಿಸಿದ್ದರು. ಅವರ ಐದು ಮಂದಿ ಸೋದರಿ ಸನ್ಯಾಸಿನಿಯರು ಆರಂಭಿಕ ಬೈಠಕ್‌ಗಳನ್ನು ಪಡೆದರು.

ಉದಾಂಗುಡಿ ಉಪಕೇಂದ್ರದಲ್ಲಿ ಸೋದರ ಮುತ್ತುಕೃಷ್ಣರವರ ಮನೆಯಲ್ಲಿ ಪರಿಚಯಾತ್ಮಕ ಸಭೆ ನಡೆದ ತರುವಾಯ ಐದುಮಂದಿ ಪ್ರಾರಂಭಿಕ ಬೈಠಕ್‌ಗಳನ್ನು ಪಡೆದರು. ಮತ್ತು ವಡಕಾಂಗುಲಂನಲ್ಲಿ ಆಶ್ರಮದಲ್ಲಿ ನಡೆದ ಪರಿಚಯಾತ್ಮಕ ಸಭೆಯಲ್ಲಿ ಹತ್ತು ಮಂದಿ ಅತಿಥಿಗಳು ಭಾಗವಹಿಸಿದ್ದರು. ವಲಯ ಸಂಚಾಲಕರಾದ ಸೋ. ರಾಮನಾಥನ್ ಮತ್ತು ಸ್ಥಳೀಯ ಪ್ರಶಿಕ್ಷಕರುಗಳು, ಸೋ. ಮೀರಾ ಶಂಕರ್ ಮತ್ತು ಸೋ. ರಾಮದಾಸ್, ಸೋ. ನಲ್ಲೈರಾಮ್, ಸೋ. ಕೃಷ್ಣರಾಜನ್ ಇವರುಗಳು ಈ ಪ್ರಯತ್ನದ ರೂವಾರಿಗಳಾಗಿದ್ದರು.



## ರಾಜಮಂಡ್ರಿ, ಆಂಧ್ರಪ್ರದೇಶ



ಆಂಧ್ರಪ್ರದೇಶದ ಕರಾವಳಿ ವಲಯವಾದ, ಶ್ರೀಕಾಕುಲಂ, ವಿಜಯನಗರಂ, ವಿಶಾಖಪಟ್ಟಣಮ್ ಹಾಗು ಪೂರ್ವ ಮತ್ತು ಪಶ್ಚಿಮ ಗೋದಾವರಿ ಜಿಲ್ಲೆಗಳಿಗೆ ಸೇರಿದ ಇಪ್ಪತ್ತೆರಡು ಪ್ರಶಿಕ್ಷಕರು ಏಪ್ರಿಲ್ ಹದಿನಾಲ್ಕರಂದು ರಾಜಮುಂಡ್ರಿಯ ನೂತನ ಆಶ್ರಮದಲ್ಲಿ ಸೇರಿದ್ದರು. ವಲಯದ ಮೇಲ್ವಿಚಾರಕರಾದ ಸಹೋದರ ಎಮ್. ಆದಿನಾರಾಯಣರವರ ಮಾರ್ಗದರ್ಶನದಲ್ಲಿ ನಡೆದ ಈ ಕಾರ್ಯಕ್ರಮವನ್ನು, "ಬೈಠಕ್ ಕೊಡುವುದು ಹೇಗೆ" ಎಂಬ ಗುರುಗಳ ಭಾಷಣದ ವೀಡಿಯೋದೊಂದಿಗೆ ಆರಂಭಿಸಲಾಯಿತು. ಈ ಕಾರ್ಯಕ್ರಮದ ನಂತರ ಸತ್ಸಂಗವು ನಡೆಯಿತು. ನೀವೆಲ್ಲರೂ ಉತ್ತಮ ಪ್ರಶಿಕ್ಷಕರಾಗಬೇಕು ಮತ್ತು ಉತ್ತಮ ಕಾರ್ಯಕರ್ತರಾಗಿ ಗುರುಗಳ ಸೇವೆ ಸಲ್ಲಿಸಬೇಕೆಂದು ವಲಯದ ಉಸ್ತುವಾರಿಯವರು ತಿಳಿಸಿದರು. ಮಕ್ಕಳು ಮತ್ತು ಯುವಜನರನ್ನು ಆಕರ್ಷಿಸುವ, ಪ್ರೋತ್ಸಾಹಿಸುವ ಹಾಗು ಅವರು ತಮ್ಮನ್ನು ಮಿಷನ್ನಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತಹ ಕಾರ್ಯಕ್ರಮಗಳನ್ನು ಅವರು ವಿವರಿಸಿದರು. ಕೆಲವು ಸಹೋದರರರು, ಉತ್ತಮ ಪ್ರಶಿಕ್ಷಕರಾಗಿ ಕೆಲಸಮಾಡುವುದರ ಕುರಿತಾಗಿ ಮತ್ತು ಯಶಸ್ವಿಯಾಗಿ ಪ್ರಯೋಗಮಾಡಲಾದ ಮಕ್ಕಳ ಚಟುವಟಿಕೆಗಳ ಬಗೆಗೆ ಉಪಯುಕ್ತ ಸಲಹೆಗಳನ್ನು ಹಂಚಿಕೊಂಡರು. ಪ್ರಶಿಕ್ಷಕರ ನಡುವೆ ಪರಸ್ಪರ ವೈಯಕ್ತಿಕ ಬೈಠಕ್‌ಗಳನ್ನು ನಡೆಸಿ ಗಮನಿಸಿದ ಸ್ಥಿತಿಗಳ ವಿಷಯವನ್ನು ವಿನಿಮಯ ಮಾಡಿಕೊಳ್ಳಲಾಯಿತು. 'ಎಸೊಟೆರಿಕ್ ಚಿಹ್ನೆ'ಗೆ ಸಂಬಂಧಿಸಿದ 'ವಿಸ್ಪರ್ಸ್' ಸಂದೇಶಗಳ ಸಂಗ್ರಹವನ್ನು ಓದುವುದಕ್ಕಾಗಿ ಮತ್ತು ಅವಲೋಕನಕ್ಕಾಗಿ ವಿತರಿಸಲಾಯಿತು. ಸತ್ಸಂಗದೊಂದಿಗೆ ಕೊನೆಗೊಂಡ ಈ ಸಭೆಯು ಪರಿಣಾಮಕಾರಿಯೂ ಮತ್ತು ಉಪಯುಕ್ತವೂ ಆಗಿತ್ತು.

## ಜಸ್ವಂತ್‌ಗಢ, ನಾಗೌರ್ ಜಿಲ್ಲೆ, ರಾಜಸ್ಥಾನ

ಏಪ್ರಿಲ್ ಆರರಂದು ಜಸ್ವಂತ್‌ಗಢ, ಲಡ್ನುನ್, ದಿದ್ವಾನ ಮತ್ತು ಸುಜನ್‌ಗಢ ಕೇಂದ್ರಗಳು ಹಾಗು ಹತ್ತಿರದ ಹಳ್ಳಿಗಳಿಗೆ ಸೇರಿದ ಸುಮಾರು ತೊಂಬತ್ತು ಅಭ್ಯಾಸಿಗಳು 'ಅಸವ ಅತಿಥಿಗೃಹ'ದಲ್ಲಿ ಸೇರಿದ್ದರು. ಸಹೋದರ ವಿಕಾಸ್ (ವಲಯದ ಮೇಲ್ವಿಚಾರಕ) ಮತ್ತು ಅನಿಲ್(ಜೋಧಪುರ) ಇವರುಗಳ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮವು ನಡೆಯಿತು. ಸತ್ಸಂಗದ ನಂತರ ಗುರುಗಳ ವಿಡಿಯೋವೊಂದನ್ನು ಪ್ರದರ್ಶಿಸಲಾಯಿತು. ನಂತರ ಉಪಾಹಾರವನ್ನು



ಏರ್ಪಡಿಸಲಾಗಿತ್ತು. ಒಂದು ಭಜನೆಯ ನಂತರ ಸತ್ಯೋದಯ ಪುಸ್ತಕದ ಅಧ್ಯಾಯವೊಂದರ ಧ್ವನಿಸುರುಳಿಯನ್ನು ಕೇಳಿಸಲಾಯಿತು. ನಂತರ ಅಭ್ಯಾಸಿಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಿ ಆಗಷ್ಟೇ ಕೇಳಿಸಿದ ಧ್ವನಿಸುರುಳಿಯ ಕುರಿತಾಗಿ ಪ್ರಶ್ನೆಗಳನ್ನು ಕೇಳಲಾಯಿತು. ಇದರ ನಂತರದ ಪ್ರಶ್ನಾವಳಿಯು 'ಸಹಜಮಾರ್ಗದ ಮೂಲತತ್ವ'ಗಳನ್ನು ಆಧರಿಸಿದುದಾಗಿತ್ತು. ಈ ಸುತ್ತಿನಲ್ಲಿ ಬಹಳಷ್ಟು ಅಭ್ಯಾಸಿಗಳು ತಮ್ಮ ವೈಯಕ್ತಿಕ ಅನುಭವಗಳ ಕುರಿತಾದ ಪ್ರಶ್ನೆಗಳಿಗೆ ಉತ್ತರವನ್ನು ಪಡೆದರು.

## ಅಹಮದಾಬಾದ್, ಗುಜರಾತ್

ಕೃಷಿ ಹಿನ್ನೆಲೆಯುಳ್ಳ ಸಹೋದರ ಸಹೋದರಿಯರ ಗುಂಪೊಂದು, ಅಹಮದಾಬಾದಿನ ಅದಲಜ್ ಆಶ್ರಮದ ಹಿತ್ತಲಿನ ಕೈತೋಟದಲ್ಲಿ ಸ್ವಯಂಸೇವಕರಾಗಿ ದುಡಿಯಲು ತಂಡವೊಂದನ್ನು ರಚಿಸಿದರು. ಕೀಟನಾಶಕರಹಿತ, ಶುದ್ಧ, ತಾಜಾ ಹಾಗು ಸಾವಯುವ ತರಕಾರಿಗಳನ್ನು ಅಭ್ಯಾಸಿಗಳಿಗೆ ಅತ್ಯಲ್ಪ ವೆಚ್ಚದಲ್ಲಿ ಒದಗಿಸುವ ಕಲ್ಪನೆಯೊಂದಿಗೆ ಇದನ್ನು ಪ್ರಾರಂಭಿಸಲಾಯಿತು. ಈ ತರಕಾರಿಗಳನ್ನು, ಭಾನುವಾರ ಹಾಗು ಇನ್ನಿತರ ವಿಶೇಷ ಸಂದರ್ಭಗಳಲ್ಲಿ ಆಶ್ರಮದಲ್ಲಿ ಕೂಡ ಬಳಸಲಾಗುತ್ತದೆ. ಸ್ವಯಂಸೇವಕರ ಮಾರ್ಗದರ್ಶನದಲ್ಲಿ, ಈ ತರಕಾರಿಗಳನ್ನು ಬೆಳೆಯುವ ವಿಧಾನದ ತರಬೇತಿಯನ್ನು ಮಕ್ಕಳಿಗೆ ನೀಡಲಾಗುತ್ತಿದೆ. ಸ್ವಯಂಸೇವಕರ ಈ ಕಠಿಣ ಶ್ರಮದ ಫಲವಾಗಿ ಉತ್ತಮವಾದ ಕೈತೋಟವನ್ನು ಆಶ್ರಮವು ಹೊಂದಿದೆ.

## ವಾರಂಗಾಂವ್, ಮಹಾರಾಷ್ಟ್ರ

ಏಪ್ರಿಲ್ 6ರಂದು, ವಾರಂಗಾಂವ್, ಭೂಸವಾಲ್, ಖಿರಡಿ, ದೀಪ್‌ನಗರ್, ಜಲಗಾಂವ್ ಮತ್ತು ಧೂಲೆಗೆ ಸೇರಿದ ಐವತ್ತೈದು ಅಭ್ಯಾಸಿಗಳು ಅರ್ಧದಿನದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದರು. 'ಹತ್ತು ನಿಯಮಗಳು ಹಾಗು ಚಾರಿತ್ರ್ಯ ನಿರ್ಮಾಣ'ದ ವಿಷಯವಾಗಿ ಸಂವಾದಾತ್ಮಕ ಹಾಗು ಶೈಕ್ಷಣಿಕ ಅವದಿಯ ನಂತರ 'ಅ ರೇರ್ ಆಪರ್ಚುನಿಟಿ' ಎಂಬ ವಿಡಿಯೋ ಪ್ರದರ್ಶಿಸಲಾಯಿತು.

ಮುಕ್ತಸಭೆ ಮತ್ತು ಮಕ್ಕಳ ಕಾರ್ಯಕ್ರಮವೊಂದನ್ನು ಸಹ ಆಯೋಜಿಸಲಾಗಿತ್ತು. ಸರಳ ಹಾಗು ಪರಿಣಾಮಕಾರಿಯಾದ ರೀತಿಯಲ್ಲಿ, ನಿರಂತರವಾದ ಅಭ್ಯಾಸದ ಮೂಲಕ, ಸಕಾರಾತ್ಮಕ ಆಲೋಚನೆಗಳನ್ನು ಹೊಂದುವಲ್ಲಿ ಸಹಜಮಾರ್ಗ ಸಾಧನೆಯ ಮತ್ತು ಅದರ ಪಾತ್ರದ ಕುರಿತಾದ ಅನೌಪಚಾರಿಕ ಚರ್ಚೆ ನಡೆಯಿತು.





## ಸೂರತ್‌ನಲ್ಲಿ VBSE, ಗುಜರಾತ್





ಏಪ್ರಿಲ್ ಹನ್ನೆರಡರಂದು, ಸೂರತ್‌ನ ಕೇಂದ್ರದಿಂದ ಮೌಲ್ಯಾಧಾರಿತ ಶಿಕ್ಷಣವನ್ನಾರಂಭಿಸುವ ಸಲುವಾಗಿ, 'ಶಿಕ್ಷಣದಲ್ಲಿ ಮೌಲ್ಯಗಳ ಅಗತ್ಯ' ಎಂಬ ಕಾರ್ಯಕ್ರಮವನ್ನು 'ರೇಡಿಯಂಟ್ ಇಂಗ್ಲೀಷ್ ಅಕಾಡೆಮಿ'ಯಲ್ಲಿ ಉಮ್ರ, ಪಿಪ್‌ಲೋಡ್‌ನಲ್ಲಿ ಪೋಷಕರಿಗಾಗಿ ಆಯೋಜಿಸಲಾಗಿತ್ತು. ನೂರಿಪ್ಪತ್ತು ಪೋಷಕರೊಂದಿಗೆ, ಶಾಲೆಯ ಪ್ರಾಂಶುಪಾಲರು, ಸಂಸ್ಥಾಪಕರು ಹಾಗು ಸಿಬ್ಬಂದಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. 'ಸ್ಪಿರಿಚುಯಲ್ ಹೈರಾರ್ಕಿ ಪಬ್ಲಿಕೇಶನ್ ಟ್ರಸ್ಟ್'(SHPT)ನ ಮೂಲಕ ಮೌಲ್ಯಾಧಾರಿತ ಶಿಕ್ಷಣದ ಹೊಸ ಪಠ್ಯಕ್ರಮವನ್ನು ಒಂಭತ್ತನೆಯ ತರಗತಿಯ ವಿದ್ಯಾರ್ಥಿಗಳಿಗೆ, ಜೂನ್ 2014 ರಿಂದ ಮಾರ್ಚ್ 2015ರ ಸಾಲಿನಲ್ಲಿ ಪರಿಚಯಿಸಲಾಗುವುದು. ಕಾರ್ಯಕ್ರಮಕ್ಕೆ ಪೋಷಕರಿಂದ ಉತ್ತಮ ಪ್ರತಿಕ್ರಿಯೆ ಬಂದಿತು. ಮಕ್ಕಳ ಭವಿಷ್ಯನಿರ್ಮಾಣದಲ್ಲಿ ಪೋಷಕರು ಬಹುಮುಖ್ಯ ಪಾತ್ರವಹಿಸುವವರಾದ್ದರಿಂದ, ಇಂತಹ ಕಾರ್ಯಕ್ರಮಗಳನ್ನು ಪೋಷಕರಿಗಾಗಿಯೂ ನಡೆಸಬೇಕೆಂದು ಕೆಲವರು ವಿನಂತಿಸಿಕೊಂಡರು.

## ಯು-ಕನೆಕ್ಟ್ – ಜೈಪುರ, ರಾಜಸ್ಥಾನ

ಜೈಪುರದ 'ಆರ್ಕ್ ಪಾಯಿಂಟ್ ಕನ್ಸಲ್ಟೆಂಟ್ಸ್ ಪ್ರೈ.ಲಿ.'ನಲ್ಲಿ ಯು-ಕನೆಕ್ಟ್‌ನ ಮೊದಲನೆಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಭಾಗವಹಿಸಿದ ಹತ್ತು ಜನ ಹಾಗು ಅಧ್ಯಾಪಕವರ್ಗದವರು ತಮ್ಮ ತಮ್ಮ ಪರಿಚಯನ್ನು ಹೇಳಿಕೊಳ್ಳುವುದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕಾರ್ಯಕ್ರಮವನ್ನು ನಡೆಸಿದ ಡಾ.ಆಶೀಶ್ ಜೋಹ್ರಿಯವರು ಮುಂದಿನ ಹದಿನಾರು ಅಧಿವೇಶನಗಳವರೆಗೂ ಎಲ್ಲ ಗುಂಪಿನವರೂ ಪಾಲಿಸಬೇಕಾದ 'ನಿಯಮ'ಗಳನ್ನು ರೂಪಿಸುವಂತೆ ಭಾಗವಹಿಸಿದವರನ್ನು ಆಹ್ವಾನಿಸಿದರು. ಅವರು ಹೇಳಿದ ಕಾಡುಬಾತುಕೋಳಿಯ ಕಥೆಯು, ಜೀವನದಲ್ಲಿ ಸರಿಯಾದ ಸಮಯಕ್ಕೆ ಸರಿಯಾದ ಕೆಲಸವನ್ನು ಮಾಡಬೇಕೆಂಬುದಾಗಿ ವಿಚಾರಮಾಡುವಂತೆ ಭಾಗವಹಿಸಿದವರನ್ನು ಪ್ರೇರೇಪಿಸಿತು. ಇದಾದ ನಂತರ, ಭಾಗವಹಿಸಿದವರಲ್ಲಿ ಆಧ್ಯಾತ್ಮಿಕ ಪ್ರಗತಿಯ ಕಲ್ಪನೆಯನ್ನು ಸೃಷ್ಟಿಸುವ ಸಲುವಾಗಿ ಕೆಲವು ಪ್ರಶ್ನೆಗಳನ್ನು ಕೇಳಲಾಯಿತು. ಪ್ರಶ್ನೆಗಳು ಹಾಗು ಉದಾಹರಣೆಗಳ ಮೂಲಕ ಸಹೋದರ ಆಶೀಶ್‌ರವರು ಆಧ್ಯಾತ್ಮಿಕ ಜೀವನವನ್ನು ಅನುಸರಿಸುವ ಅಗತ್ಯತೆಯನ್ನು ಒತ್ತಿಹೇಳಿದರು. ಅಧಿವೇಶನವು ಸಂವಾದಾತ್ಮಕವಾಗಿದ್ದು ಭಾಗವಹಿಸಿದವರಿಗೆ ಸಂತಸ ತಂದಂತೆ ಕಂಡುಬಂದಿತು.

## ಸ್ವಯಂಸೇವಕರ ಸಮಾವೇಶ, ಮುಂಬೈ

ಫೆಬ್ರವರಿ ಹತ್ತೊಂಬತ್ತರಂದು ಮುಂಬೈನ ಉದಯಗಿರಿಯಲ್ಲಿರುವ, ಸೋದರಿ ಶುಭ್‌ದಾ ನಾಯಕ್‌ರವರ ಮನೆಯಲ್ಲಿ ಸುಮಾರು 40 ಜನ ಅಭ್ಯಾಸಿಗಳು ಸೇರಿದ್ದರು. ಮಿಷನ್ನಿನಲ್ಲಿ ಸ್ವಯಂಸೇವೆ ಸಲ್ಲಿಸುವುದರ ಬಗೆಗೆ ಮಾತನಾಡಿದ ಸೋದರ ಮೋಹನ್‌ದಾಸ್ ಹೆಗಡೆಯವರು ತಮ್ಮ ವೈಯಕ್ತಿಕ ಅನುಭವಗಳೊಂದಿಗೆ, ವೃತ್ತಾಂತಗಳು ಹಾಗು ಹೇಳಿಕೆಗಳ ಮೂಲಕ ವಿವರಿಸಿದರು. ನಾವು ಗುರುಗಳ ಸಾಧನಗಳಾಗಬೇಕು ಎಂಬ ಸಲಹೆಯನ್ನಿತ್ತ ಅವರು, ಸೇವೆಯ ಮೂಲಕ ನಾವು ಪ್ರೇಮವನ್ನು ಬೆಳೆಸಿಕೊಳ್ಳಬೇಕೆಂಬ ಅಭಿಪ್ರಾಯಪಟ್ಟರು. ಸಮನ್ವಯ ಹಾಗು ಒಂದು ಸಮಿತಿಯ ರಚನೆಯು ಕೆಲಸವನ್ನು ಆರಂಭಿಸಲು ಉತ್ತಮ ವೇದಿಕೆಯಾಗಬಲ್ಲುದು ಎಂದು ಅವರು ಪ್ರಸ್ತಾಪಿಸಿದರು. ಗುಂಪಿನಲ್ಲಿರುವ ಒಬ್ಬರು ಇತರ ಸ್ವಯಂಸೇವಕರಿಗೆ ತಿಂಗಳಿನೊಳಗೆ ಕರೆಮಾಡಿ, ನಾನು ಉತ್ತಮ ಅಭ್ಯಾಸಿಯಾಗುವುದು ಹೇಗೆ? ನಾನು ಸೇವೆ ಸಲ್ಲಿಸುವುದನ್ನು ಆರಂಭಿಸಿದ್ದೇನೆಯೆ? ಉತ್ತಮ ಸೇವೆ ಸಲ್ಲಿಸಲು ನಾನೇನು ಮಾಡಬಹುದು? ಎಂಬಂತಹ ಪ್ರಶ್ನೆಗಳನ್ನು ಕೇಳಬಹುದು ಎಂದು ಸೂಚಿಸಿದರು.

## ಶ್ರೀನಗರ

ಜಮ್ಮು ಕೇಂದ್ರದ ತಂಡವೊಂದು ಮಾರ್ಚ್ 28 ರಿಂದ 31 ರವರೆಗೆ ಶ್ರೀನಗರಕ್ಕೆ ಭೇಟಿಯಿತ್ತು, ಬಾದಾಮಿ ಬಾಗ್‌ನ ಗ್ರೂಪ್ ಸೆಂಟರ್ CRPF ಶಿಬಿರದಲ್ಲಿ ಧ್ಯಾನ ಹಾಗು ಶುದ್ಧೀಕರಣದ ವಿಷಯದ ಮೇಲೆ GITP ಮಾಡ್ಯೂಲ್‌ಗಳನ್ನು ನಡೆಸಿಕೊಟ್ಟರು. ಶ್ರೀನಗರವು ಗಲಭೆಪೀಡಿತ ಪ್ರದೇಶವಾಗಿದ್ದು ನಿಷೇಧಾಜ್ಞೆ ಹಾಗು ಬಂದ್‌ಗಳು ದಿನನಿತ್ಯದ ವಿಷಯವಾಗಿರುವ ಕಾರಣದಿಂದ ಅಲ್ಲಿ ನಡೆದ ಮೊದಲ ಕಾರ್ಯಕ್ರಮ ಇದಾಗಿತ್ತು.

ಸುಮಾರು ಮೂವತ್ತೈದು ಅಭ್ಯಾಸಿಗಳು ಅಲ್ಲಿ ಸೇರಿದ್ದರು. ಭಾಗವಹಿಸಿದವರಲ್ಲಿ ಬಹುಪಾಲು ಮಂದಿ ದೇಶದ ಎಲ್ಲ ಮೂಲೆಗಳಿಂದ ಬಂದಂತಹ CRPF ಜವಾನರು. ವಲಯ 11-Aನ ಮೇಲ್ವಿಚಾರಕರಾದ ಸಹೋದರ ಸುರೇಂದರ್ ಶರ್ಮಾ (ಜಮ್ಮು ಕೇಂದ್ರ) ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ಜಮ್ಮುವಿನ ಪ್ರಶಿಕ್ಷಕ ಸಹೋದರ ಕಿಶೋರ್ ಹಾಗು ಅಶ್ವಿನಿ ಠಾಕೂರ್‌ರವರು GITP ಕಾರ್ಯಕ್ರಮವನ್ನು ನಡೆಸಿಕೊಟ್ಟರು.





## ಯುವ ಸಮಾವೇಶಗಳು



### ಬಿಲ್ವಾರ, ರಾಜಸ್ಥಾನ

ಫೆಬ್ರವರಿಯ ಕಡೆಯ ಭಾನುವಾರ, ಬೆಳಗಿನ ಧ್ಯಾನದ ನಂತರ ನಡೆದ ಒಂದು ವಿಶೇಷ ಕಾರ್ಯಕ್ರಮದಲ್ಲಿ ಸುಮಾರು ಹನ್ನೆರಡು ಯುವ ಅಭ್ಯಾಸಿಗಳು ಭಾಗವಹಿಸಿದ್ದರು. ದಿನನಿತ್ಯದ ಜೀವನದಲ್ಲಿ ನಮ್ಮ ನಡವಳಿಕೆಗಳನ್ನು ಹೇಗೆ ಸುಧಾರಿಸಿಕೊಳ್ಳಬೇಕೆಂಬ ವಿಷಯವಾಗಿ ಲಾಲಾಜಿ ಮಹಾರಾಜರ ಜನ್ಮದಿನೋತ್ಸವದಂದು ಸಹೋದರ ಕಮಲೇಶ್ ಪಟೇಲ್‌ರವರು ನೀಡಿದ ಭಾಷಣದ ಆಯ್ದ ಭಾಗಗಳನ್ನು ಸಹೋದರಿಯೊಬ್ಬರು ಉಲ್ಲೇಖಿಸಿದರು. ನಂತರ ಅಭ್ಯಾಸಿಗಳು, ಸಹಜಮಾರ್ಗ ಸೇರಿದ ನಂತರದಲ್ಲಿ ಅವರ ನಡವಳಿಕೆಯಲ್ಲಾದ ಬದಲಾವಣೆಗಳನ್ನು ಪರಸ್ಪರ ಹಂಚಿಕೊಂಡರು. ಸಾಧನೆಯನ್ನು ಮಾಡುವುದು ಕಷ್ಟಕರವೆನಿಸಿದವರಿಗೆ 'ಸಹಜಮಾರ್ಗದ ಮೂಲತತ್ವ' ಎಂಬ ಪುಸ್ತಕವನ್ನು ಓದಲು ತಿಳಿಸಲಾಯಿತು ಮತ್ತು ವೈಯಕ್ತಿಕ ಬೈಠಕ್‌ಗಾಗಿ ಪ್ರಶಿಕ್ಷಕರ ಬಳಿಹೋದಾಗ ಅವರೊಂದಿಗೆ ಚರ್ಚಿಸಲು ಸೂಚಿಸಲಾಯಿತು.

ಮಾರ್ಚ್ ಮೂವತ್ತರಂದು ಆಯೋಜಿಸಿಲಾಗಿದ್ದ ಮತ್ತೊಂದು ಯುವಕರ ಸಭೆಯಲ್ಲಿ ಭಂಡಾರದ ಪರಿಕಲ್ಪನೆಯನ್ನು ಹೊಸ ಅಭ್ಯಾಸಿಗಳಿಗೆ ಪರಿಚಯಿಸಲಾಯಿತು. ಈ ಹಿಂದೆ ಭಂಡಾರದಲ್ಲಿ ಭಾಗವಹಿಸಿದ್ದ ಅಭ್ಯಾಸಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು. ಬಾಬೂಜಿಯವರ ಜನ್ಮದಿನದ ಆಚರಣೆಯನ್ನು ಸ್ಥಳೀಯವಾಗಿ ಆಚರಿಸಲು ಬೇಕಾಗುವ ಸಿದ್ಧತೆಗಳನ್ನು ಪ್ರಾರಂಭಿಸಲಾಯಿತು ಮತ್ತು ಕೆಲಸದ ವಿವಿಧ ವಿಭಾಗಗಳ ಕುರಿತಾದ ಆರಂಭಿಕ ಯೋಜನೆಯನ್ನು ಚರ್ಚಿಸಲಾಯಿತು. ಅಭ್ಯಾಸಿಗಳು ವಿವಿಧ ರೀತಿಯ ಸ್ವಯಂಸೇವೆಗಳಿಗಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡರು.

### ವಾರಣಾಸಿ, ಉತ್ತರ ಪ್ರದೇಶ

ಎಂಟು ಪ್ರಶಿಕ್ಷಕರು, ಐದು ಸಹಾಯಕ ಸಿಬ್ಬಂದಿ, ಹತ್ತು ಸ್ವಯಂಸೇವಕರು ಮತ್ತು ಹನ್ನೆರಡು ಹೊಸ ಅಭ್ಯಾಸಿಗಳು ಭಾಗವಹಿಸಿದ್ದ ಮೂರು ದಿನಗಳ ವಿಚಾರಗೋಷ್ಠಿಯೊಂದನ್ನು ಏಪ್ರಿಲ್ ಹನ್ನೆರಡರಿಂದ ಹದಿನಾಲ್ಕರವರೆಗೆ ವಾರಣಾಸಿ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಮೊದಲಿಗೆ, ಎಲ್ಲರಿಗೂ ವೈಯಕ್ತಿಕ ಬೈಠಕ್‌ಗಳನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ – ಪ್ರೀತಿ, ಶಿಸ್ತು, ವಿಧೇಯತೆ, ಸೇವೆ, ಗುರುಗಳ ಅಂಗೀಕಾರ, ಹತ್ತು ನಿಯಮಗಳು ಮತ್ತು ಸಹಜಮಾರ್ಗದಲ್ಲಿ ಯುವಕರ ಪಾತ್ರ ಈ ವಿಷಯಗಳ ಮೇಲೆ ಭಾಷಣಗಳಿದ್ದುವು. ಅದರ ಜೊತೆಗೆ 'ಆಧ್ಯಾತ್ಮಿಕತೆ ಏಕೆ ಬೇಕು?' ಎಂಬ ವಿಷಯದ ಕುರಿತು ಮತ್ತು ವಿವಿಧ ಸಂಸ್ಥೆ ಹಾಗು ಟ್ರಸ್ಟ್‌ಗಳಾದ LMOIS, CREST, SMSF, SHPT ಮತ್ತು ರಿಟ್ರೀಟ್ ಕೇಂದ್ರಗಳ ಕುರಿತಾದ ನಿರೂಪಣೆಗಳಿದ್ದುವು. ಭಾಗವಹಿಸಿದವರಿಗೆ ಮಿಷನ್ನಿನ ಪುಸ್ತಕಗಳನ್ನು ನೀಡಿ, ಕೊಟ್ಟಿರುವ ವಿಷಯವನ್ನು ಪ್ರಸ್ತುತಪಡಿಸಲು ಹೇಳಲಾಯಿತು. ಅದಲ್ಲದೆ 'ಜೀವನದ ಕಲೆ', ' ಅಭ್ಯಾಸವು ನಮ್ಮನ್ನು ಪಾರಂಗತರನ್ನಾಗಿಸುತ್ತದೆ', 'ಪ್ರೀತಿಯು ಮನೆಯಲ್ಲೇ ಪ್ರಾರಂಭವಾಗುತ್ತದೆ' ಮತ್ತು ' ತಾಳ್ಮೆಯ ಫಲ ಸಿಹಿಯಾಗಿರುತ್ತದೆ' ಎಂಬ ಕಿರು ನಾಟಕಗಳನ್ನು ಕೂಡ ಅವರು ಪ್ರದರ್ಶಿಸಿದರು. ನಂತರದ ಎರಡು ಗಂಟೆಯ ಅವಧಿಯನ್ನು ಸ್ವಯಂಸೇವೆಯಲ್ಲಿ ಕಳೆದರು. ಕಾರ್ಯಕ್ರಮದಲ್ಲಿ, ಗುರುಗಳ ಕೆಲವು ಭಾಷಣಗಳು, 'ಗೋಲ್ಡನ್ ಸೈಲೆನ್ಸ್' ಮತ್ತು ಸಮೂಹ ಧ್ಯಾನಗಳು ಕೂಡ ಇದ್ದುವು. ಕೊನೆಯಲ್ಲಿ, ಭಾಗವಹಿಸಿದವರು ಕಾರ್ಯಕ್ರಮದ ಬಗೆಗೆ ತಮಗಾದ ಅನುಭವವನ್ನು ಹಂಚಿಕೊಂಡರು.

### ಮೊರಾದಾಬಾದ್‌ಗೆ ವಲಯದ ಮೇಲ್ವಿಚಾರಕರ ಭೇಟಿ, ಉತ್ತರ ಪ್ರದೇಶ

ಏಪ್ರಿಲ್ ಹದಿಮೂರರಂದು ಸಹೋದರ ಅಶೋಕ್ ಗಾರ್ಗ್‌ರವರು (ZIC) ಮೊರದಾಬಾದ್ ಆಶ್ರಮಕ್ಕೆ ಭೇಟಿಯನ್ನಿತ್ತರು. ಸತ್ಸಂಗ ನಡೆಸಿಕೊಟ್ಟನಂತರ ಭಂಡಾರಗಳಿಗೆ ಹೋಗುವುದರ ಅವಶ್ಯಕತೆ ಮತ್ತು ಸಹಜಮಾರ್ಗದ ಸಾಧನೆಯ ಮಹತ್ವವನ್ನು ಒತ್ತಿಹೇಳಿದರು. ನಂತರ ಪ್ರಶಿಕ್ಷಕರ ಸಭೆಯ ಅಧ್ಯಕ್ಷತೆಯನ್ನುವಹಿಸಿದ ಅವರು, ಆ ಕೇಂದ್ರವನ್ನು ಬೆಳೆಸುವುದರ ಬಗೆಗಿನ ಮುಂದಿನ ಯೋಜನೆಗಳನ್ನು ಅವರೊಂದಿಗೆ ಚರ್ಚಿಸಿದರು. ಅವರು ಆಶ್ರಮದ ಆಡಳಿತ ಸಮಿತಿಯ ಸಭೆಯಲ್ಲಿ ಕೂಡ ಭಾಗವಹಿಸಿ, ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿದರು ಮತ್ತು ಆಶ್ರಮದ ನಿರ್ವಹಣೆಯ ವಿಚಾರವಾಗಿ ಸಲಹೆಗಳನ್ನು ನೀಡಿದರು.

### ಮನಮಧುರೈ – ತಮಿಳುನಾಡು ದಕ್ಷಿಣವಲಯದ ಮೇಲ್ವಿಚಾರಕರ ಭೇಟಿ

ಮನಮಧುರೈ, ಶಿವಗಂಗೆ, ಕಾರೈಕುಡಿ, ಪರಮಕುಡಿ ಮತ್ತು ರಾಮನಾಥಪುರಂ ಕೇಂದ್ರಗಳಿಂದ ಬಂದಿದ್ದ ಸುಮಾರು 130 ಅಭ್ಯಾಸಿಗಳಿಗಾಗಿ ಪೂರ್ಣ ದಿನದ ಕಾರ್ಯಕ್ರಮವೊಂದನ್ನು, ಫೆಬ್ರವರಿ 23ರಂದು ಮನಮಧುರೈನಲ್ಲಿ ಆಯೋಜಿಸಲಾಗಿತ್ತು. ಸತ್ಸಂಗ ಮತ್ತು ಉಪಾಹಾರದ ನಂತರ ಅಭ್ಯಾಸಿಗಳನ್ನು ಏಳು ಗುಂಪುಗಳಾಗಿ ವಿಂಗಡಿಸಲಾಯಿತು. ಸಹಜಮಾರ್ಗ ಸಾಧನೆಯ ಅಂಶಗಳಾದ – ಧ್ಯಾನ, ಶುದ್ಧೀಕರಣ, ಪ್ರಾರ್ಥನೆ, ಸೇವೆ, ಗುರುಗಳೆಡೆಗೆ ಪ್ರೇಮ, ಚಾರಿತ್ರ್ಯ ನಿರ್ಮಾಣ ಇವೇ ಮೊದಲಾದುವುಗಳನ್ನು ಗುಂಪುಗಳಿಗೆ ವಿಷಯವಾಗಿ ಕೊಡಲಾಗಿತ್ತು. ಚರ್ಚೆಯ ನಂತರ, ಪ್ರತಿ ಗುಂಪಿನಿಂದ ಒಬ್ಬ ಅಭ್ಯಾಸಿಯು ತನ್ನ ಗುಂಪಿನ ವಿಚಾರವನ್ನು ಮಂಡಿಸಿದರು.

ಅಭ್ಯಾಸಿಗಳು ಸಹಜಮಾರ್ಗದ ತತ್ವಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡು, ನಮ್ಮ ಗುರುಗಳ ಇಚ್ಛೆಯಂತೆ ಸರಳವಾದ ಹಾಗು ನೈಸರ್ಗಿಕವಾದ ಜೀವನ ಸಾಗಿಸಬೇಕೆಂದು ಸಹೋದರ ರಾಮನಾಥನ್ ಹೇಳಿದರು.




ಒಂದು ನಾಟಕ ಮತ್ತು ಕೆಲವು ಆಸಕ್ತಿಕರ ಕಾರ್ಯಕ್ರಮಗಳನ್ನು ಮಕ್ಕಳು ನಡೆಸಿಕೊಟ್ಟರು. 2013ರಲ್ಲಿ, ತಿರುಪ್ಪೂರಿನಲ್ಲಿ ನಡೆದ ಬಾಬೂಜಿಯವರ ಜನ್ಮದಿನಾಚರಣೆಯ ಸಂದರ್ಭದಲ್ಲಿ ಮೊದಲ ಬಾರಿಗೆ ಈ ಕಾರ್ಯಕ್ರಮಗಳನ್ನು ಮಕ್ಕಳ ಕೇಂದ್ರದಲ್ಲಿ ನಡೆಸಲಾಗಿತ್ತು.

ಭೋಜನದ ನಂತರ ನಡೆದ ಒಂದು ಗಂಟೆಯ ಪ್ರಶ್ನೋತ್ತರದ ಅವಧಿಯು ಸಹಜಮಾರ್ಗವನ್ನು ಅಭ್ಯಾಸಿಗಳಿಗೆ ಚೆನ್ನಾಗಿ ಅರ್ಥಮಾಡಿಸಿ ಅದು ಹೃದಯದಲ್ಲಿ ಆಳವಾಗಿ ಬೇರೂರುವಂತೆ ಮಾಡಿತು. ಕಾರ್ಯಕ್ರಮವು ಸಂಜೆಯ ಸತ್ಸಂಗದೊಂದಿಗೆ ಮುಕ್ತಾಯಗೊಂಡಿತು.



## ರಾಯಚೂರು, ಕರ್ನಾಟಕ


ಬೆಂಗಳೂರಿನ ವೆಂಕಟರಾವ್ ಮತ್ತು ಅವರ ತಂಡದವರು, ಎಪ್ರಿಲ್ 5–6ರಂದು ರಾಯಚೂರಿನ ಆಶ್ರಮದಲ್ಲಿ, ರಾಯಚೂರು, ಗುಲಬರ್ಗಾ, ಶೊರಾಪುರ, ಗೋಗಿ ಮತ್ತು ಇನ್ನಿತರ ಕೇಂದ್ರಗಳ ಸುಮಾರು ಒಂದು ನೂರು ಅಭ್ಯಾಸಿಗಳಿಗಾಗಿ" ಮಿಷನ್ನಿನ ಸಾಹಿತ್ಯವನ್ನೋದುವುದರ ಮಹತ್ವ" ಎಂಬ ವಿಷಯದ ಮೇಲೆ ಕಾರ್ಯಕ್ರಮವೊಂದನ್ನು ನೆರವೇರಿಸಿದರು. ಎರಡೂ ದಿನಗಳ ಕಾರ್ಯಕ್ರಮಗಳು ಬೆಳಗಿನ 7.30ರ ಸತ್ಸಂಗದೊಂದಿಗೆ ಪ್ರಾರಂಭವಾದವು. ವ್ಯಾಖ್ಯಾನ, ಪ್ರಶ್ನೋತ್ತರಗಳು, ಪರಸ್ಪರ ಚರ್ಚೆ, ರಸಪ್ರಶ್ನೆಗಳು ಹಾಗು ಇನ್ನಿತರ ಕಾರ್ಯಕ್ರಮಗಳ ನಂತರ ಸಾಯಂಕಾಲದ ಸತ್ಸಂಗದೊಂದಿಗೆ ಮುಕ್ತಾಯವಾಗುತ್ತಿದ್ದವು. ಉತ್ತರ ಕರ್ನಾಟಕ ವಲಯದ ಪ್ರಮುಖರಾದ ಸೋ. ಗಜೇಂದ್ರಸಿಂಗರವರು ಕಾರ್ಯಕ್ರಮದಾದ್ಯಂತ ಉಪಸ್ಥಿತರಿದ್ದು, ಆಗಾಗ ಮಾಹಿತಿಗಳನ್ನಿತ್ತು ಸಹಕರಿಸಿದರು. ಎಲ್ಲಾ ಅಭ್ಯಾಸಿಗಳು ಇದರಿಂದ ಲಾಭ ಪಡೆದು ಆನಂದ ವ್ಯಕ್ತಪಡಿಸಿದರು. ಇಂತಹುದೇ ಕಾರ್ಯಕ್ರಮವನ್ನು ಗುಲಬರ್ಗಾ ಆಶ್ರಮದಲ್ಲಿಯೂ ಜೂನ್ ತಿಂಗಳ ಕೊನೆಯ ವಾರದಲ್ಲಿ ಆಚರಿಸಲು ಯೋಜಿಸಲಾಯಿತು.



## ಖರಗ್‌ಪುರ, ಪಶ್ಚಿಮ ಬಂಗಾಳ

ಖರಗ್‌ಪುರ ಕೇಂದ್ರದಲ್ಲಿ ಮಾರ್ಚ 9ರಂದು, 35 ಹೊಸ ಅಭ್ಯಾಸಿಗಳಿಗಾಗಿ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಯಿತು. ಭೌತಿಕ ವಸ್ತುಗಳನ್ನು ಪಡೆದುಕೊಳ್ಳುವ ಹವ್ಯಾಸಕ್ಕಿಂತ ಜೀವನದ ಗುರಿಯನ್ನು ಸಾಧಿಸಿಕೊಳ್ಳುವುದಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕಾದ ಆವಶ್ಯಕತೆಯ ವಿಷಯವಾಗಿ ಗುರುಗಳು ನೀಡಿದ ಭಾಷಣದ ವಿಡಿಯೊವನ್ನು ಪ್ರಸ್ತುತ ಪಡಿಸಲಾಯಿತು. ಸಾಧನೆಯ ಬಗೆಗಿನ ವಿವಿಧ ಶಂಕೆಗಳನ್ನು ನಿವಾರಿಸಲಾಯಿತು. ಕೆಲ ಅಭ್ಯಾಸಿಗಳಿಗೆ, ತಾವು ತಮ್ಮ ದಿನನಿತ್ಯದ ಸಾಧನೆಯನ್ನು ಯಾವ ರೀತಿ ಮಾಡುತ್ತಿರುವರೆಂಬುದನ್ನು ವಿವರಿಸಲು ಕೇಳಲಾಯಿತು. ಅವರು ಪದ್ಧತಿಯನ್ನು ವಿಧಿವತ್ತಾಗಿ ಪಾಲಿಸುತ್ತಿಲ್ಲವೆಂಬುದನ್ನು ಕಂಡುಕೊಳ್ಳಲಾಯಿತು. ನಂತರ ಅವರಿಗೆ ಸರಿಯಾದ ಸಾಧನಾ ಪದ್ಧತಿಯ ಬಗ್ಗೆ ಮಾರ್ಗದರ್ಶನವನ್ನೀಯಲಾಯಿತು. "ಸಹಜ ಮಾರ್ಗ ಸಾಧನೆ " ಎಂಬ ಪುಸ್ತಿಕೆಯಲ್ಲಿಯ, ಪ್ರಾರ್ಥನೆ, ಧ್ಯಾನ, ಶುದ್ಧೀಕರಣದ ಬಗ್ಗೆ ಬಂಗಾಲೀ ಹಾಗು ಆಂಗ್ಲಭಾಷೆಗಳಲ್ಲಿ ಓದಲಾಯಿತು ಹಾಗು ಹಿಂದಿಯಲ್ಲಿಯೂ ಭಾಷಾಂತರಿಸಲಾಯಿತು. ಸಹೋದರಿ ಚಂದ್ರಕಾಂತಾರವರು, ಪ್ರಾರ್ಥನೆ, ಧ್ಯಾನ, ಶುದ್ಧೀಕರಣ, ಸತ್ಸಂಗ ಹಾಗು ಭಂಡಾರಗಳ ವಿಷಯದಲ್ಲಿ ಹಿಂದಿಯಲ್ಲಿ ಪ್ರಸ್ತುತಿಯನ್ನಿತ್ತರು. ಚಹಾ ಮತ್ತು ತಿನಿಸುಗಳೊಂದಿಗೆ ಸತ್ರದ ಮುಕ್ತಾಯವಾಯಿತು.

## ಹೊಸ ಪ್ರಕಟಣೆಗಳು




ಟುವರ್ಡ್ಸ್ ಇನ್‌ಫಿನಿಟಿ ತಮಿಳು




ವಾಟ್ ಈಸ್ ಸಹಜ್‌ಮಾರ್ಗ್ ಮರಾಠಿ





ವೆ ಕೆಹತೆ ಹ್ಯೆಂ ಭಾಗ 5 ಹಿಂದಿ

## ಹೊಸ ನೇಮಕಾತಿಗಳು

ಗೋವಾ ಕೇಂದ್ರ ಪ್ರಮುಖರು

ಸೋ.ದತ್ತಪ್ರಸಾದ ವಿನಾಯಕ ಭೋಂಸಲೆ





ಮೈ ಮಾಸ್ಟರ್ ಆಡಿಯೋ ಪುಸ್ತಕ – ತೆಲುಗು



ರಿಯಾಲಿಟಿ ಅಟ್ ಡಾನ್ ಆಡಿಯೋ ಪುಸ್ತಕ – ಬಂಗಾಳಿ




ಟುವರ್ಡ್ಸ್ ಇನ್‌ಫಿನಿಟಿ ಆಡಿಯೋ ಪುಸ್ತಕ –ಹಿಂದಿ







ರಿಯಾಲಿಟಿ ಅಟ್ ಡಾನ್ ಆಡಿಯೋ ಪುಸ್ತಕ – ಮಲಯಾಳಂ


ಸಹಜ್‌ಮಾರ್ಗ್ ಮಿಯಾಂಡರಿಂಗ್ಸ್ ತಮಿಳು, ತೆಲುಗು, ಹಿಂದಿ, ಮರಾಠಿ, ಗುಜರಾತಿ, ಕನ್ನಡ, ಮಲಯಾಳಂ




ದಿ ಪಾಯಿಂಟ್ ಆಫ್ ಅಟೆನ್ಷನ್ ಡಿವಿಡಿ – ಆಂಗ್ಲ




ಇಂಡಿಯಾ ಇನ್ ದ ವೆಸ್ಟ್ ಡಿವಿಡಿ – ಆಂಗ್ಲ




ಇನ್ ಟ್ಯೂನ್ ವಿತ್ ದ ನೇಚರ್ ಡಿವಿಡಿ – ಆಂಗ್ಲ

## ಕೇರಳ ವಲಯ ಆಶ್ರಮ, ಆಲುವಾ

## ಪ್ರಭಾ ಕೇಂದ್ರ



ಆಲುವಾದಲ್ಲಿ ಸತ್ಸಂಗದ ಮೊದಲನೆಯ ಸ್ಥಳವು ಸೋ.ಎಂ.ಪಿ. ಮಧುಸೂದನರವರ ಮನೆಯಾಗಿತ್ತು. ಅಭ್ಯಾಸಿಗಳ ಸಂಖ್ಯೆ ಹೆಚ್ಚಾಗುತ್ತಿದ್ದಂತೆ, ಮನೆಯ ಮಹಡಿಯ ಮೇಲೆ ಧ್ಯಾನಮಂದಿರವನ್ನು ಕಟ್ಟಿ, 20ನೇ ಮೇ 1994 ರಂದು, ಆಗಿನ ಕಾರ್ಯದರ್ಶಿಗಳಾದ ಸೋ. ಸರ್ನಾಡಜೀಯವರಿಂದ ಉದ್ಘಾಟಿಸಲಾಯಿತು.

ಔಪಚಾರಿಕವಾಗಿ, ಗುರುಗಳ ಕೇರಳದ ಮೊದಲನೆಯ ಭೇಟಿಯು ಸಪ್ಟೆಂಬರ್ 6, 1995ರಂದು ಆಯಿತು. ಆಲುವಾದಲ್ಲಿಯ ಮಹಾತ್ಮಾಗಾಂಧಿ ಪುರಸಭೆಯ ಸಭಾಂಗಣದಲ್ಲಿ ಆಯೋಜಿಸಲಾದ ಭವ್ಯವಾದ ಸಮಾರಂಭದಲ್ಲಿ ಸುಮಾರು 800 ಅಭ್ಯಾಸಿಗಳು ಉಪಸ್ಥಿತರಿದ್ದರು.

12 ಜನವರಿ 1996ರಂದು, ಗುರುಗಳು ಸಮೀಪದ ಕದುಂಗಲೂರು ಎಂಬ ಗ್ರಾಮದಲ್ಲಿಯ ಭೂಮಿಯನ್ನು ಕೊಂಡುಕೊಳ್ಳಲು ಅನುಮತಿಯನ್ನಿತ್ತರು. ಎರಡು ಎಕರೆಗಿಂತಲೂ ಹೆಚ್ಚಿನ ತಗ್ಗು ಪ್ರದೇಶದಲ್ಲಿಯ ಭೂಭಾಗವನ್ನು ಖರೀದಿಸಿ, ಕೆಂಪು ಮಣ್ಣಿನಿಂದ ತುಂಬಿ ಸುತ್ತುಗೋಡೆ ಹಾಗು ಮುಖ್ಯ ದ್ವಾರವನ್ನು ಕಟ್ಟಲಾಯಿತು ಮತ್ತು ಇದಕ್ಕೆ 'ಸಹಜ ಗ್ರಾಮಮ್' ಎಂದು ಹೆಸರಿಡಲಾಯಿತು. 70 ಸೆಂಟಗಳಷ್ಟು ಭೂಭಾಗವನ್ನು ಮಿಷನ್ನಿಗಾಗಿ ಕಾದಿರಿಸಿ, ಉಳಿದುದರಲ್ಲಿ ಐದು ಸೆಂಟನ್ನು ನಿವೇಶನಗಳನ್ನಾಗಿ ವಿಭಾಗಿಸಲಾಯಿತು. ಇಪ್ಪತ್ತೆಂಟು ಅಭ್ಯಾಸಿಗಳು ಪ್ರಾರಂಭಿಕ ವೆಚ್ಚಗಳನ್ನು ವಹಿಸಿಕೊಂಡರು, ಮತ್ತು ಈಗ ಹತ್ತು ಕುಟುಂಬಗಳು ಈ ಪರಿಸರದಲ್ಲಿ ವಾಸಿಸುತ್ತವೆ.

ಗುರುಗಳು ದಿ. 25ನೇ ಫೆಬ್ರುವರಿ 2001 ರಂದು ಈ ಕೇಂದ್ರದ ತಮ್ಮ ಎರಡನೇ ಭೇಟಿಯಲ್ಲಿ ಆಶ್ರಮದ ಉದ್ಘಾಟನೆಯನ್ನು ನೆರವೇರಿಸಿದರು. ಆಗ ಉಪಲಬ್ಧವಿರುವ ಅನುಕೂಲತೆಗಳೆಂದರೆ, 5000 ಚ.ಅಡಿಯ ಧ್ಯಾನ ಕಕ್ಷ, ಹಾಗು ಮೊದಲನೆಯ ಅಂತಸ್ತಿನಲ್ಲಿ ಮೂರು ಕಡೆ ವಸತಿ ಗೃಹಗಳು ಮತ್ತು ಎರಡನೆಯ ಅಂತಸ್ತಿನಲ್ಲಿ ಎರಡು ದೊಡ್ಡ ಮೇಲತ್ತರದ ನೀರಿನ ತೊಟ್ಟಿಗಳು. ಗುರುಗಳು ಮಿಷನ್ನಿಗಾಗಿ, ಇನ್ನೂ ಕೆಲ ಭೂಭಾಗವನ್ನು ಅಭ್ಯಾಸಿಗಳಿಂದ ಕೊಂಡುಕೊಳ್ಳಲು ಸಲಹೆಯನ್ನಿತ್ತರು. ಹೀಗಾಗಿ ಈಗ ಮಿಷನ್ 1.14 ಎಕರೆ ಜಮೀನನ್ನು ಪಡೆದುಕೊಂಡಿದೆ.

"ಪ್ರಕೃತಿಯ ಮೊದಲನೆಯ ಹಾಗು ಕೊನೆಯ ನಿಯಮವೆಂದರೆ, 'ಯಾವುದೂ ನನ್ನದಲ್ಲ'. ಆದರೆ ಒಂದು ವೇಳೆ ನಾನು ದೈವೀ ಕೃಪೆಯು ನನ್ನ ಮೂಲಕ ಹರಿಯುವ ನಳಿಕೆಯಾದರೆ, ನಾನು ಶಾಶ್ವತವಾಗಬಲ್ಲೆ. ಏಕೆಂದರೆ, ಶಾಶ್ವತತೆಗೆ ಸತತವಾಗಿ ಹರಿಯಗೊಡುವ ಶಾಶ್ವತ ನಳಿಕೆಯ ಆವಶ್ಯಕತೆ ಇರುತ್ತದೆ."


ಪಿ. ರಾಜಗೋಪಾಲಾಚಾರಿ, ಸೆಪ್ಟೆಂಬರ್ 6, 1995 – ಆಲುವಾ.



ಆಶ್ರಮವನ್ನು 2011ರಲ್ಲಿ, ಕೇರಳದ ವಾಸ್ತುಶಿಲ್ಪ ಮಾದರಿಯ ಮುಂಭಾಗ (ಅತಿಶಯ ಮಳೆ ಹಾಗು ಆರ್ದ್ರತೆಯನ್ನು ಗಮನಿಸಿ) ಉಕ್ಕಿನ ರಚನೆ, ಬಣ್ಣದ ಅಲ್ಯುಮಿನಿಯಂ ಹಾಗು ಉಕ್ಕಿನ ಸಂಯುಕ್ತ ತಗಡಿನ ಮಾಳಿಗೆಗಳೊಂದಿಗೆ ನವೀಕರಿಸಲಾಯಿತು. ಈ ಕೆಲಸವು 2012ರ ಪ್ರಾರಂಭದಲ್ಲಿ ಪೂರ್ಣಗೊಳಿಸಲಾಯಿತು. ನೂತನೀಕರಿಸಿದ ಆಶ್ರಮದ ವಿಡಿಯೊವನ್ನು ಮನಪಾಕ್ಕಂ ಆಶ್ರಮದಲ್ಲಿ ಗುರುಗಳಿಗೆ ತೋರಿಸಿದಾಗ ಅವರು, 'ಅದ್ಭುತ!' ಎಂದು ಉದ್ಗರಿಸಿದರು.

ವಿಕೇಂದ್ರೀಕರಿಸಿದ ಭಂಡಾರಗಳು, ವಲಯ ಸ್ಥರದ ಸಭೆಗಳು, ಪ್ರಶಿಕ್ಷಣ ಕಾರ್ಯಕ್ರಮಗಳು ಮತ್ತು ಪ್ರಶಿಕ್ಷಕರ ಸಭೆಗಳನ್ನು ಇಲ್ಲಿ ನೆರವೇರಿಸಲಾಗುತ್ತದೆ. ವಲಯದ ಲೆಕ್ಕಪತ್ರಗಳಿಗಾಗಿ ಮತ್ತು SHPT ಹಾಗು SRCM ಪ್ರಕಟಿತ ಸಾಹಿತ್ಯಗಳ ವಿತರಣೆಗಾಗಿ ಈ ಆಶ್ರಮವು ಮುಖ್ಯ ಕೇಂದ್ರವಾಗಿ ಕೆಲಸ ಮಾಡುತ್ತದೆ. ಕೇರಳದಲ್ಲಿಯ ಮಿಷನ್ನಿನ ಕೇಂದ್ರೀಕರಿಸಿದ ಎಲ್ಲಾ ಕಾರ್ಯಕಲಾಪಗಳನ್ನು ಸಹ ಆಲುವಾದಲ್ಲಿಯೇ ನಿಭಾಯಿಸಿಕೊಳ್ಳಲಾಗುತ್ತದೆ.







To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2014 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.